ಅಧ್ಯಕ್ಷರು : ಶಿವಕುಮಾರ್‌ರವರೇ, ಇಲ್ಲಿ ಲೋಕಸಭಾ ಸದಸ್ಯರ ವಿಚಾರವಾಗಿ ಚರ್ಚಿಸುತ್ತಿಲ್ಲ. ಈ ಸದನದ ಸದಸ್ಯರಾಗಿರುವ ಸಭಾ ನಾಯಕರ ಕುರಿತಾಗಿ, ಅವರು ಕೊಟ್ಟಿರುವ ಹೇಳಿಕೆ ಕಾರಣದಿಂದಾಗಿ ಹೇಳಿಕೆ ಕೊಟ್ಟಿರುವವರು ಅವರಾಗಿರುವುದರಿಂದ ಆ ಬಗ್ಗೆ ನಾನು ಚರ್ಚಿಸಬೇಕಾಗಿ ಬಂದಿದೆ ಅಷ್ಟೆ. ನೀವು ಹಿಂದೊಮ್ಮೆ ಹೇಳಿರುವ ಪ್ರಸಂಗ ನನಗೆ ನೆನಪಿದೆ. ಯಾರು ಈ ಸದನದ ಸದಸ್ಯರಲ್ಲವೋ, ಯಾವ ವಿಷಯ ಈ ಸದನಕ್ಕೆ ಸಂಬಂಧಿಸಿಲ್ಲವೋ ಆ ಬಗ್ಗೆ ನಾವು ವಿಷಯ ಚರ್ಚಿಸುವುದು ಸಾಧ್ಯವಿಲ್ಲವಾದ್ದರಿಂದ ಅದಕ್ಕೋಸ್ಕರ ಬೇಡವೆಂದು ಆಗ ಹೇಳಿದ್ದೆ.

ಶ್ರೀ ವಾಟಾಳ್ ನಾಗರಾಜ್ : ಈಗ ನಾನು ನಿರ್ಣಯ ಮಂಡಿಸುತ್ತಿರುವುದರಿಂದ ದಯವಿಟ್ಟು ಇದಕ್ಕೆ ಅನುಮತಿ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ತಾವು ನಿರ್ಣಯವನ್ನು ಕಳುಹಿಸಿಕೊಡಿ, ಮತ್ತು ತೀರ್ಪು ನೀಡಲು ನನಗೆ ಸ್ವಲ್ಪ ಸಮಯ ಕೊಡಿ, ಸೋಮವಾರದೊಳಗೆ ನನ್ನ ತೀರ್ಪು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಕಾಲಾವಕಾಶ ತೆಗೆದುಕೊಳ್ಳಬಾರದೆಂದಲ್ಲ, ಇದರಲ್ಲಿ ಕಾಲಾವಕಾಶ ತೆಗೆದುಕೊಳ್ಳವಂಥಾದ್ದೇನಿದೆ? ಈ ಬಗ್ಗೆ ನೇರವಾಗಿ ಪತ್ರಿಕೆಯಲ್ಲಿ ಬಂದಿದೆ. ಹೇಳಿಕೆಯಿತ್ತವರು ಇದುವರೆವಿಗೂ ಅದನ್ನು ಅಲ್ಲಗಳೆದಿಲ್ಲದಿರುವುದರಿಂದ ತೀರ್ಪು ನೀಡಲು ನನಗೆ ಸೋಮವಾರದವರೆಗೆ ಅವಕಾಶ ಕೊಡಿ ಎಂದು ಏಕೆ ಕೇಳುತ್ತಿದ್ದೀರೆಂದು ನನಗರ್ಥವಾಗಿಲ್ಲ.

ಅಧ್ಯಕ್ಷರು : ಇವೊತ್ತು ಸದನವನ್ನು ಮುಂದೂಡಿದರೆ ಪುನ: ಸೋಮವಾರವೇ ನಾವು ಸಮಾವೇಶಗೊಳ್ಳುವುದು. ಈಬಗ್ಗೆ ತಾವು ಮೋದಲೇ ನನ್ನ ಹತ್ತಿರ ಚರ್ಚಿಸಿ ಇವೊತ್ತು ಸದನದಲ್ಲಿ ಪ್ರಸ್ತಾಪಿಸಿದ್ದೀರಿ. ಇದು ಬಹಳ ಗಂಭೀರ ವಿಚಾರವಾಗಿರುವುದರಿಂದ ನಾನು ಅಧಿಕಾರಿಗಳೊಂದಿಗೆ ಚರ್ಚಿಸಿ, ಹಿಂದಿನ ಸಭಾಧ್ಯಕ್ಷರುಗಳು ಇಂತಹ ಸನ್ನಿವೇಶಗಳಲ್ಲಿ ಏನು ಮಾಡಿದ್ದರು ಎಂಬುದನ್ನು ಕುರಿತು ಪುಸ್ತಕದಲ್ಲಿರುವುದನ್ನು ನೋಡಿ ಸೋಮವಾರದೊಳಗೆ ನಾನು ನಿರ್ಣಯ ತೆಗೆದು ಕೊಳ್ಳುತ್ತೇನೆ. ಏಕೆಂದರೆ, ದುಡುಕಿ ತೀರ್ಮಾನ ತೆಗೆದುಕೊಂಡೆ ಎಂದು ಆಗಬಾರದು. ತಮ್ಮ ವಾದವನ್ನು ನಾನು ಪೂರ್ಣವಾಗಿ ಆಲಿಸಿದ್ದು, ತೀರ್ಪು ನೀಡಲು ನನಗೆ ಸೋಮವಾರದವರೆಗೆ ಸಮಯ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಈ ನಿರ್ಣಯವನ್ನು ತಮಗೆ ಕಳಉಹಿಸಿಕೊಡುತ್ತೇನೆ.

ಗಮನ ಸೆಳೆಯುವ ಸೂಚನೆ

ಏಷಿಯನ್ ಏಜ್‌ಪತ್ರಿಕೆ ಮೇಲೆ ಧಾಳಿ ಮತ್ತು ಗುಂಡ್ಲುಪೇಟೆಯಲ್ಲಿ ಪತ್ರಕರ್ತ ಸತ್ಯನಾರಾಯಣರವರ ಕೊಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, 'ಏಷಿಯೆನ್ ಏಜ್' ಪತ್ರಿಕೆ ಮೇಲೆ ಧಾಳಿ ನಡೆದಿರುವುದು ಮತ್ತು ಗುಂಡ್ಲುಪೇಟೆಯಲ್ಲಿ ಪತ್ರಕರ್ತರಾಗಿದ್ದ ಸತ್ಯನಾರಾಯಣರವರ ಕೊಲೆಯಾಗಿರುವ ಬಗ್ಗೆ ನಾನು ಗೃಹ ಮತ್ತು ವಕ್ಫ್ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 6.7.1997ರಂದು ಸಂಜೆ 8.30 ಗಂಟೆಗೆ ಸುಮಾರು 20 ಜನ ದುಷ್ಕರ್ಮಿಗಳು ಸಂಖ್ಯೆ : 68, ಲ್ಯಾವೆಲಿ ರಸ್ತೆ ಬೆಂಗಳೂರು ಇಲ್ಲಿರುವ "ಏಷಿಯನ್ ಏಜ್" ದಿನಪತ್ರಿಕೆಯ ಕಛೇರಿಗೆ ನುಗ್ಗಿ ಅಲ್ಲಿನ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿ, ಕುರ್ಚಿ, ಮೇಜು, ಮುಂತಾದ ವಸ್ತುಗಳಿಗೆ ಬೆಂಕಿ ಹಚ್ಚಿ ನಷ್ಟ ಉಂಟು ಮಾಡಿರುತ್ತಾರೆ. ಈ ದೌರ್ಜನ್ಯವು "ಏಷಿಯನ್ ಏಜ್" ಪತ್ರಿಕೆಯಲ್ಲಿ ದಿನಾಂಕ 5.7.1997ರಂದು "ಕೋಟ್ಸ್ ಆಫ್ ದಿ ವೀಕ್" ಎಂಬ ತಲೆ ಬರಹದ ಅಡಿ ಪ್ರಕಟವಾದ ಸುದ್ಧಿಗೆ ಪ್ರತಿಕ್ರಿಯೆಯಾಗಿರುತ್ತದೆ ಎಂದು ತಿಳಿದು ಬಂದಿದೆ.

"ಏಷಿಯನ್ ಏಜ್" ಪತ್ರಿಕೆಯ ನೌಕರರು ಪೋಲೀಸರನ್ನು ಸಂಪರ್ಕಿಸಲಾಗಿ, ಕಬ್ಬನ್ ಪಾರ್ಕ್ ಪೋಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮತ್ತು ಅದರ ಸಿಬ್ಬಂದಿ ಕೂಡಲೇ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವಲ್ಲಿ ಹಾಗೂ ದುಷ್ಕರ್ಮಿಗಳನ್ನು ಪತ್ತೆ ಹಚ್ಚುವಲ್ಲಿ ತೊಡಗಿದ್ದಾರೆ. ಅಷ್ಟರಲ್ಲಿ ಅಗ್ನಿಶಾಮಕ ವಾಹನಗಳೂ ಸಹ ಆಗಮಿಸಿ ಬೆಂಕಿಯನ್ನು ನಂದಿಸಿರುತ್ತವೆ. ಡಿ.ಸಿ.ಪಿ. (ಕೇಂದ್ರ), ಬೆಂಗಳೂರು ನಗರ, ಅವರು ಸಹ ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆಯ ಉಸ್ತಿವಾರಿ ವಹಿಸಿರುತ್ತಾರೆ. ಪತ್ರಿಕೆಯ ಕೆಲವು ಸಿಬ್ಬಂದಿ ಸರ್ಕ್ಯುಲೇಷನ್ ಕೊಠಡಿಯಲ್ಲಿ ಸಿಕ್ಕಿಹಾಕಿಕೊಂಡಿದ್ದು, ಬಾಗಿಲನ್ನು ಒಡೆದು ಅವರನ್ನು ಸಹ ರಕ್ಷಿಸಲಾಯಿತು. ಬೆಂಕಿ ಮತ್ತು ಯಥೇಚ್ಚವಾದ ಹೊಗೆಯಲ್ಲಿ ಒಳಗೆ ಹೋಗುವುದು ದು:ಸಾಧ್ಯವಾಗಿದ್ದರೂ ಹೆಚ್ಚು ಸಿಬ್ಬಂದಿಯ ಸಹಾಯದಿಂದ ತೀವ್ರ ಹುಡುಕಾಟ ನಡೆಸಲಾಗಿ ಪತ್ರಿಕೆಯ ಉಪ ಸಂಪಾದಕ ಶ್ರೀಕಾಂತ್ ಪ್ರಜ್ಞೆ ತಪ್ಪಿ ನೆಲದ ಮೇಲೆ ಬಿದ್ದಿರುವುದು ಕಂಡು ಬಂತು. ಅವರನ್ನು ಆ ಸ್ಥಳದಿಂದ ಹೊರತಂದು ಮಲ್ಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಯಿತು. ಅಲ್ಲದೇ ಶ್ರೀ ಮಂಜುನಾಥ್ ಮತ್ತು ಶ್ರೀ ಜಾನ್ ಕೆನಡಿ ಎಂಬ ಇನ್ನಿಬ್ಬರು ಸಿಬ್ಬಂದಿಯೂ ಸಹ ಗಾಯಗೊಂಡಿದ್ದು, ಅವರನ್ನೂ ಸಹ ಆಸ್ಪತ್ರೆಗೆ ಸೇರಿಸಲಾಯಿತು.

ಈ ಸಂಬಂಧದಲ್ಲಿ ಕಬ್ಬನ್ ಪಾರ್ಕ್ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ : 372:97 ಚಿಚ್ಚಿ 143, 147, 148, 327, 307, 436, ರೆ:ವಿ 149 ಐಪಿಸಿ ಯಲ್ಲಿ ಶ್ರೀ ಜಾನ್ ಕೆನಡಿ ಎಂಬುವವರ ದೂರಿನನ್ವಯ ಒಂದು ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ. ತನಿಖೆಯಿಂದ, ಈ ಘಟನೆಗೆ ಒಂದು ದಿನ ಮುಂಚೆ ಯಾರೋ ಅನಾಮಧೇಯರು "ಏಷಿಯನ್ ಏಜ್" ಪತ್ರಿಕಾ ಕಛೇರಿಯನ್ನು ದೂರವಾಣಿಯಲ್ಲಿ ಸಂಪರ್ಕಿಸಿ, ದಿನಾಂಕ:5.7.1997ರ ಪತ್ರಿಕೆಯಲ್ಲಿ "ಕೋಟ್ಸ್ ಆಫ್ ದಿ ವೀಕ್" ಎಂಬ ತಲೆಬರಹದ ಅಡಿ ಪ್ರಕಟ ಮಾಡಿರುವ ಸುದ್ಧಿಗಾಗಿ ಇವರನ್ನು ಬೈದುದಾಗಿ ತಿಳಿದು ಬಂದಿದೆ. ಅವರುಗಳು ಉರ್ದು ಮತ್ತು ಇಂಗ್ಲಿಷ್ ಭಾಷೆಗಳನ್ನು ಉಪಯೋಗಿಸುತ್ತಿದ್ದುದಾಗಿಯೂ ಸಹ ತಿಳಿದು ಬಂದಿದೆ.

ತನಿಖೆಯು ತೀವ್ರ ಗತಿಯಲ್ಲಿ ಸಾಗುತ್ತಿದೆ.

ಶ್ರೀ ಸತ್ಯನಾರಾಯಣ, ಪತ್ರಕರ್ತ, ಬೆಂಗಳೂರು ಕನ್ನಡ ಹಂತ ವರ್ತಮಾನ ಪತ್ರಿಕೆ ರವರ ಕೊಲೆಯ ವಿವರ

ಶ್ರೀ ಸತ್ಯನಾರಾಯಣ ಅವರು 'ಹಂತ' ಪತ್ರಿಕೆಯ ವರದಿಗಾರರಾಗಿದ್ದು, ಅವರನ್ನು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿದ್ದು, ಅವರ ಶವವು ದಿನಾಂಕ : 7.6.97ರಂದು ಗುಂಡ್ಲುಪೇಟೆಯ ಹತ್ತಿರದ ರಾಮದೇವರ ಗುಡ್ಡದಲ್ಲಿ ಸಿಕ್ಕಿರುತ್ತದೆ. ಅದೇ ದಿನ ಅವರ ಸಹೋದ್ಯೋಗಿ ಗುಂಡ್ಲುಪೇಟೆಯ ಶ್ರೀ ವೇಣುಗೋಪಾಲ್ ಎಂಬುವವರಿಂದ ಒಂದು ದೂರನ್ನು ಪಡೆದು ಅದನ್ನು ಗುಂಡ್ಲುಪೇಟೆಯ ಪೋಲೀಸ್ ಠಾಣೆಯ ಕ್ರೈಂ ಸಂಖ್ಯೆ :160:97 ಕಲಂ302 ಐಪಿಸಿ ಯಲ್ಲಿ ದಾಖಲು ಮಾಡಿಕೊಳ್ಳಲಾಗಿದೆ. ತಮ್ಮದೂರಿನಲ್ಲಿ ಶ್ರೀ ವೇಣುಗೋಪಾಲ್‌ರವರು ದಿ.ಸತ್ಯನಾರಾಯಣ ರವರು ದಿನಾಂಕ:2.6.1997ರಂದು ಗುಂಡ್ಲುಪೇಟೆಗೆ ಬಂದಿದ್ದುದಾಗಿಯೂ, ಹಾಗೂ ಶ್ರೀ ಪುಟ್ಟರಂಗನಾಯಕ ಎಂಬುವವರ ತೋಟದ ಮನೆಯಲ್ಲಿ ತಂಗಿದ್ದುದಾಗಿಯೂ ತಿಳಿಸಿರುತ್ತಾರೆ. ಹಾಗೂ, ತಾವು ಸತ್ಯನಾರಾಯಣರವರನ್ನು ಕೊನೆಯ ಬಾರಿ ದಿನಾಂಕ:5.6.1997ರಂದು ಬೆಳಿಗ್ಗೆ 7.30 ಗಂಟೆಗೆ ನೋಡಿದುದಾಗಿಯೂ, ಆಗ ಅವರು ಶ್ರೀ ನಾಗೇಂದ್ರ, ಮುನಿಸಿಪಲ್ ಕೌನ್ಸಿಲರ್, ಗುಂಡ್ಲುಪೇಟೆ, ಅವರ ಮೋಟಾರ್ ಸೈಕಲ್‌ನ ಹಿಂಭಾಗದಲ್ಲಿ ಕುಳಿತು ಅವರಿಬ್ಬರೂ ಸುಲ್ತಾನ್ ಬತೇರಿ ಕಡೆ ಹೋಗುತ್ತಿರುವುದಾಗಿಯೂ ತಿಳಿಸಿರುತ್ತಾರೆ. ಶವದ ಮರಣೋತ್ತರ ಪರೀಕ್ಷೆಯಿಂದ ಶವದ ಮೇಲೆ ಅನೇಕ ತಿವಿತದ ಗಾಯಗಳಿದ್ದುದು ತಿಳಿದು ಬಂದಿರುತ್ತದೆ. ಶ್ರೀ ಸತ್ಯನಾರಾಯಣರವರು ತಂಗಿದ್ದ ಶ್ರೀ ಪುಟ್ಟರಂಗನಾಯಕರವರ ಮನೆಯನ್ನು ಶೋಧಿಸಲಾಗಿ ಶ್ರೀ ಸತ್ಯನಾರಾಯಣರ ಬಟ್ಟೆಗಳು, ಒಂದು ಡೈರಿ, ಮತ್ತಿತರ ಕಾಗದ, ಪತ್ರಗಳು ಸಿಕ್ಕಿರುತ್ತವೆ. ದಿನಾಂಕ : 11.6.1997 ರಂದು ಶ್ರೀ ನಾಗೇಂದ್ರರವರನ್ನು ದಸ್ತಗಿರಿ ಮಾಡಲಾಗಿದೆ ಮತ್ತು ಅವರ ಮನೆಯಿಂದ ದಿ.ಸತ್ಯನಾರಾಯಣರವರಿಗೆ ಸೇರಿದ್ದು ಒಂದು ಕ್ಯಾಮರಾ ಸಿಕ್ಕಿದೆ. ಶ್ರೀ ಸತ್ಯನಾರಾಯಣರವರು ತಮ್ಮ "ಹಂತ" ಪತ್ರಿಕೆಯಲ್ಲಿ ಬಂಡೀಪುರ ಕಾಡಿನಲ್ಲಿ ತೇಗದ ಮರದ ಕಳ್ಳತನ ಮತ್ತು ಇತರ ವಿಷಯಗಳ ಮೇಲೆ ಆಗಾಗ್ಗೆ ಲೇಖನಗಳನ್ನು ಬರೆಯುತ್ತಿದ್ದು, ಅನೇಕ ವ್ಯಕ್ತಿಗಳ ಮೇಲೆ ಇಲ್ಲಸಲ್ಲದ ಆಪಾದನೆಗಳನ್ನು ಮಾಡುತ್ತಿದ್ದುದಾಗಿಯೂ ಹಾಗೂ ಅವರ ತೇಜೋವಧೆಗೆ ಪ್ರಯತ್ನಿಸುತ್ತಿದ್ದುದಾಗಿಯೂ ತಿಳಿದು ಬಂದಿದೆ. ಇದು ಅವರ ಕೊಲೆಗೆ ಕಾರಣವಾಗಿರಬೇಕೆಂಬ ಸಂಶಯವಿದೆ. ಮುಂದಿನ ತನಿಖೆಗಾಗಿ ಈ ಮೊಕದ್ದಮೆಯನ್ನು ಸಿ.ಓ.ಡಿ.ಗೆ ವಹಿಸಲಾಗಿದೆ. ತನಿಖೆ ಮುಂದುವರೆದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮೊದಲನೆಯ ಕೇಸ್‌ನಲ್ಲಿ ಅಂದರೆ ಏಷಿಯನ್ ಏಜ್ ಪೇಪರ್‌ಗೆ ಅಟ್ಯಾಕ್ ಮಾಡಿದಂತಹ ಸಂದರ್ಭದಲ್ಲಿ ಏನು ನಡೆಯಿತು ಎನ್ನುವ ಬಗ್ಗೆ ಕೆಲವು ಸಂಗತಿಗಳನ್ನು ಹೇಳಿದ್ದಾರೆ. ಆದರೆ ಆ ಪತ್ರಿಕೆಯ ಎಡಿಟರ್ ಅವರೇ ಸ್ಪಷ್ಟವಾಗಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅಂದರೆ ಇದರ ಹಿಂದೆ ಕೆಲವು ಜನರ ಕೈವಾಡ ಇದೆ. ಬಹುಶಃ ಯಾವುದೇ ಒಂದು ಧರ್ಮದವರಾಗಲೀ ಅಥವಾ ಯಾರಿಗೆ ಆ ಒಂದು ಆರ್ಟಿಕಲ್ ಪ್ರಿಂಟ್ ಮಾಡಿದ್ದರ ಬಗ್ಗೆ ಅಂತಹ ನೋವೇನೂ ಇಲ್ಲ. ಆದರೆ ಪತ್ರಿಕೆ ನಡೆಸಿಕೊಡಬಾರದು. ಆ ಒಂದು ದಿಸೆಯಿಂದ ಇದು ಮಾಡಿರಬಹುದು ಎನ್ನುವಂತಹ ಸಂಶಯವನ್ನು ವ್ಯಕ್ತ ಮಾಡಿದ್ದಾರೆ. ಈಗ ತಮ್ಮ ಗಮನಕ್ಕೆ ಒಂದು ಸ್ಟೇಟ್‌ಮೆಂಟ್ ಬ್ರೀಫಾಗಿ ತರುತ್ತೇನೆ. ಎಂ.ಜೆ. ಅಕ್ಬರ್ ಹೀಗೆ ಹೇಳಿದ್ದಾರೆ.

"The article was never provacative. The attack was not personally prejudiced, but a motivated one. I think the attack was carried out by a set of paranoid people or it was a play and simple show to bully newspapers writing against their wishes said Akbar". I don't believe the attack was a muslim reaction. If seene would have been different. It is also not the Bangalore culture to resort to violence. However, it is up to police to find out the miscreants and the motive behind the attack. Further......." ಎಂದು ಹೇಳಿದ್ದಾರೆ. ಪ್ರೊಫೆಶನಲ್ ಜೆಲಸಿ ಇದೆಯೇನೋ ಏನು ಇದೆಯೋ ಎಂದು ಇದನ್ನು ಕೂಡ ಹೇಳಿದ್ದಾರೆ.``I am sure that the Indian media will never stop to such level". ಅಂದರೆ ಈ ರೀತಿಯಾಗಿ ನಮಗೆ ಫ್ರೀಡಂ ಆಫ್ ಸ್ಪೀಚ್ ಇದ್ದ ಮೇಲೆ ಅಥವಾ ನಾವು ಬರೆಯುವುದಕ್ಕೆ ಈ ದೇಶದಲ್ಲಿ ಮುಕ್ತವಾದ ಅವಕಾಶ ಇದ್ದಾಗ ಮತ್ತು ಪ್ರಜಾಪ್ರಭುತ್ವದಲ್ಲಿ ಮೀಡಿಯ ಕೂಡ ನಾಲ್ಕು ಕಂಬಗಳಲ್ಲಿ ಇದೂ ಒಂದು ಕಂಭ. ಫೋರ್ತ್ ಪಿಲ್ಲರ್ ಎಂದು ಹೇಳಿ ಇದಕ್ಕೆ ನಾವು ಗುಣಗಾನ ಮಾಡುವಾಗ, ಅದರ ರಕ್ಷಣೆ ಮಾಡತಕ್ಕ ಜವಾಬ್ದಾರಿ ಕೂಡ ಇವತ್ತು ನಮ್ಮದಾಗಿದೆ. ಅಂದಾಗ ಅಲ್ಲಿ ಮಿಸ್ ಗ್ರೈಂಟ್ಸ್ ಏನು ಹೋಗಿದ್ದರೆ ಅವರನ್ನು ಇಲ್ಲಿಯವರೆಗೆ ಪತ್ತೆ ಹಚ್ಚಿ ಯಾವ ರೀತಿಯಾಗಿ ಶಿಕ್ಷೆ ಕೊಡಬೇಕಾಗಿತ್ತು, ಆ ಶಿಕ್ಷೆ ಕೂಡ ಕೊಟ್ಟಿಲ್ಲ. ಆದರೆ ಅವರು ಕೇವಲ ಇದಕ್ಕೆ ಮಾತ್ರ ಸೀಮಿತವಾಗಿ ಉಳಿದಿದ್ದಾರೆ ಎನ್ನತಕ್ಕ ಪ್ರಶ್ನೆ ಅಲ್ಲ. ಬಹುಶಃ ಅವರ ಹೇಳಿಕೆಯ ಮೇಲೆ ಅವರು ಅಟ್ಯಾಕ್ ಮಾಡಿದ್ದಾರೆ. ಅದಕ್ಕಾಗಿ ಈ ಅಟ್ಯಾಕ್ ಮಾಡುವುದಕ್ಕೆ ಹಚ್ಚಿದಂತಹವರು ಯಾರು? ಇದರ ಹಿನ್ನೆಲೆ ಏನು ಇದೆ ಮತ್ತು ಯಾರು ಅವರಿಗೆ ಪ್ರೋತ್ಸಾಹ ಕೊಟ್ಟು ನೀವು ಹೋಗಿ ಅಲ್ಲಿ ಅಟ್ಯಾಕ್ ಮಾಡಿ ಎಂದು ಹೇಳಿದರು? ಅನೇಕ ಜನ ಸಾಯುತ್ತಾ ಸಾಯುತ್ತಾ ಬದುಕಿದ್ದಾರೆ. ಅವರಿಗೇನೋ ತಕ್ಷಣ ಇಲ್ಲಿ ಹಾಸ್ಪಿಟಲ್‌ಗೆ ಒಯ್ದು ಚಿಕಿತ್ಸೆ ಮಾಡಿದ ಕಾರಣಕ್ಕಾಗಿ ಅವರ ಪ್ರಾಣ ಉಳಿದಿದೆ. ಇಲ್ಲ ಎಂದರೆ ಇದೇ ರೀತಿ ಆಗುತ್ತಿತ್ತು. ಇದೇನೋ ದೊಡ್ಡ ನ್ಯೂಸ್ ಪೇಪರ್‌ನವರ ಗತಿ ಈ ರೀತಿಯಾದರೆ ಇನ್ನೂ ಸಣ್ಣ ಪುಟ್ಟ ನ್ಯೂಸ್ ಪೇಪರ್‌ನವರದ್ದಂತೂ ಪ್ರಾಣವೇ ಹೋಗುತ್ತದೆ. ಈಗಾಗಲೇ ಸತ್ಯನಾರಾಯಣ ಅವರದ್ದು ಹೋಗಿದೆ. ಸಣ್ಣ ನ್ಯೂಸ್ ಪೇಪರೇ? 'ಹಂತ' ಎನ್ನತಕ್ಕ ವೀಕ್ಲಿ, ಫೋರ್ಟ್‌ನೈಟ್ಲಿ ಅಂತಹ ಪತ್ರಿಕೆಯ ಎಡಿಟರ್ ಏನೋ ಒಂದು ಕೆಲವು ರಾಜಕಾರಣಿಗಳು ಫಾರೆಸ್ಟ್ ವೆಲ್ತ್‌ನ್ನು ಎಕ್ಸ್‌ಪ್ಲಾಯ್ಟ್ ಮಾಡುತ್ತಿದ್ದಾರೆ ಎನ್ನತಕ್ಕ ಆರ್ಟಿಕಲ್ ಬರೆದಿದ್ದಕ್ಕಾಗಿ ಅವರ ಕೊಲೆಯೇ ಆಯಿತು. ಇಲ್ಲೇ ಬೆಂಗಳೂರಿನಲ್ಲೇ, ಮೇನ್ ರೋಡಿನಲ್ಲಿ ಆಫೀಸ್ ಇದೆ. ಆದರೆ ಅವರ ಕೊಲೆ ಆಗಲಿಲ್ಲ. ಆದರೆ ಡ್ಯಾಮೇಜು ಮಾಡಿದರು. ಹೊಡೆದರು, ಇಂಜೂರೀಸ್ ಆಯಿತು. ಇದು ಏಕೆ ಆಗಿದೆ ಅಂದರೆ ಇಡೀ ಬೆಂಗಳೂರಿನಲ್ಲಿ ಲಾ ಅಂಡ್ ಆರ್ಡರ್ ಹದಗೆಟ್ಟಿದೆ. ಕಾನೂನು ವ್ಯವಸ್ಥೆ ದಿನಾ ದಿನ ಕೆಡುತ್ತಿದೆ. ಇಡೀ ಬಾಂಬೆಯಲ್ಲಿರತಕ್ಕಂತಹ ಗೂಂಡಾಗಳು, ಎಸ್ಟೇಟ್ ಏಜೆಂಟ್‌ಗಳು ಪ್ರಾಪರ್ಟಿಯನ್ನು ಪರ್ಚೇಸ್ ಮಾಡುವುದಕ್ಕೆ ಅಥವಾ ಪ್ರೊಫೆಷನಲ್ ಜೆಲಸಿ. ಇವೆಲ್ಲ ಕೂಡ ಇವತ್ತು ಬರುತ್ತಿದೆ. ಅದಕ್ಕೆ ಕಡಿವಾಣ ಹಾಕತಕ್ಕದ್ದು, ನಿಲ್ಲಿಸತಕ್ಕ ಶಕ್ತಿ ಸರ್ಕಾರದ ಮುಂದೆ ಇದೆ. ಅದ್ಕಕೆ ಇಂಥ ಪರಿಸ್ಥಿತಿ ಬಂದಿದೆ. ಅದೇ ರೀತಿಯಾಗಿ ಏಶಿಯನ್ ಏಜ್ ಪತ್ರಿಕೆಯ ಮೇಲೆ ಈ ರೀತಿಯಾಗಿ ಅಟ್ಯಾಕ್ ಮಾಡಿದರು.

ಇನ್ನೊಂದು ಕಡೆ ಸತ್ಯನಾರಾಯಣ್ ಅವರ ಕೊಲೆಯನ್ನು ಗುಂಡ್ಲುಪೇಟೆಯಲ್ಲಿ ಮಾಡಿ ಅವರನ್ನು ಒಯ್ದು ನ್ಯಾಷನಲ್ ಹೈವೇಯಿಂದ ಒಂದು ಕಿಲೋಮೀಟರ್‌ನಲ್ಲಿ ಬಿಸಾಕಿ ಬಿಟ್ಟದ್ದುದು ಇದೆಲ್ಲಾ ನಾವು ನೋಡಿದರೆ ಯಾರೂ ಹೇಳುವವರು ಕೇಳುವವರು ಇಲ್ಲ ಎಂದು ಅನ್ನಿಸುತ್ತದೆ. ಗುಂಡ್ಲುಪೇಟೆಯಲ್ಲಿ ಸುಮಾರು ಒಂದು ತಿಂಗಳಿಂದ ಎಜಿಟೇಶನ್ ನಡೆಯುತ್ತಿದೆ. ಪ್ರೊಸೆಷನ್ ಕಂಡಕ್ಟ್ ಮಾಡುತ್ತಿದ್ದಾರೆ. ಅನೇಕ ಸಾರಿ ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ನಾನು ಕೂಡ ಇದರ ಬಗ್ಗೆ ಸಿಬಿಐ ಎನ್‌ಕ್ವೈರಿ ಮಾಡಿ ಎಂದು ಹೇಳಿದೆ. ಏಕೆಂದರೆ ನೇರವಾಗಿ ಸತ್ಯನಾರಾಯಣ ಅವರ ಪತ್ನಿಯವರೇ ಮುಖ್ಯಮಂತ್ರಿಗಳ ಹತ್ತಿರ ಬಂದು ಅರ್ಜಿ ಕೊಟ್ಟು ಹೋಗಬೇಕು ಎಂದು ಬಂದರೆ ಅವರ ಅರ್ಜಿಯನ್ನು ಕೂಡ ತೆಗೆದುಕೊಳ್ಳತಕ್ಕ ಪುರುಸೊತ್ತು ಮುಖ್ಯಮಂತ್ರಿಗಳಿಗೆ ಇರಲಿಲ್ಲ. ಇದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ತಾವು ನೋಡಿರಬಹುದು, ಅವರಿಗೆ ಕೂಡ ಗೊತ್ತಿದೆ. ಅಂದರೆ ಯಾರು ತಮ್ಮ ದುಃಖ ದುಮ್ಮಾನಗಳನ್ನು ಹೇಳಿಕೊಳ್ಳಬೇಕು. ಎಂದು ಇಲ್ಲಿಯವರೆಗೆ ಬರುತ್ತಾರೋ, ಯಾರು ನೊಂದಂತಹ ಜನರು, ಇದ್ದಾರೋ, ಯಾರು ಒಂದು ಜನರ ಅಭಿಪ್ರಾಯವನ್ನು ಅಥವಾ ಸರ್ಕಾರದ ಆಸ್ತಿಪಾಸ್ತಿಯನ್ನು ಉಳಿಸಬೇಕೆಂದು ಹೇಳಿ ತನ್ನ ಪತ್ರಿಕೆಯಲ್ಲಿ ಬರೆದು ಇವತ್ತಿನ ದಿವಸ ಕೆಲವು ಬೆಳಕನ್ನು ಚೆಲ್ಲತಕ್ಕ ಕೆಲಸವನ್ನು ಮಾಡಿದ್ದಾರೆ. ಅವರ ಪ್ರಾಣವನ್ನು ತೆಗೆಯತಕ್ಕ ಕೆಲಸವನ್ನು ರಾಜಕಾರಣಿಗಳು ಮಾಡಿದರೆ ಅವರಿಗೆ ಪ್ರೋತ್ಸಾಹವನ್ನು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಿದರೆ ಇದು ಎಲ್ಲಿ ನ್ಯಾಯ? ಎಲ್ಲಿಗೆ ಹೋಗಬೇಕು? ಯಾರನ್ನು ಕೇಳಬೇಕು? ಧರಣಿ ಮಾಡಿದರೆ ನೀವು ಟೈಮ್ ವೇಸ್ಟ್ ಮಾಡುತ್ತೀರಿ ಎಂದು ಹೇಳುತ್ತೀರಿ. ನಾವು ಅರ್ಜಿ ಕೊಟ್ಟರೆ ನೀವು ತೆಗೆದುಕೊಳ್ಳುವುದಿಲ್ಲ. ಅಥವಾ ಇಲ್ಲಿ ನಾವು ಆರ್ಗ್ಯುಮೆಂಟ್ ಮಾಡಿದರೆ ಪದೇ ಪದೇ ಏನು ಹೇಳುತ್ತೀರಿ ಎಂದು ಹೇಳುತ್ತೀರಿ. ನಾವು ಯಾವ ಭಾಷೆಯಲ್ಲಿ ಹೇಳಬೇಕು? ಪ್ರಜಾಪ್ರಭುತ್ವದಲ್ಲಿ ನಮಗೆ ಅನ್ಯಾಯ ಮಾಡಿದ್ದರೆ ಅವರಿಗೆ ನೇರವಾಗಿ ಹೋಗಿ ಚೂರಿ ಹಾಕುವುದಕ್ಕೆ ಆಗುತ್ತದಾ? ಏನು ಲಡಾಯಿ ಮಾಡುವುದಕ್ಕೆ ಆಗುತ್ತದಾ ಹಿಂದಿನ ಹಾಗೆ. ಪ್ರಜಾಪ್ರಭುತ್ವದಲ್ಲಿ ನಾವು ಇಂತಹ ಎಲ್ಲ ಅನ್ಯಾಯ ಆಗತಕ್ಕದ್ದನ್ನು ಈ ಸದನಕ್ಕೆ ತರತಕ್ಕದ್ದು ನಮ್ಮ ಕರ್ತವ್ಯ. ಸದನದಲ್ಲಿ ತಂದಂತಹ ನ್ಯಾಯವಾಗಿರತಕ್ಕ ಬೇಡಿಕೆಗಳಿಗೆ ನೀವು ಮನ್ನಣೆ ಕೊಟ್ಟು ಸಂಬಂಧಪಟ್ಟಂತೆ ಎನ್‌ಕ್ವೈರಿ ಮಾಡತಕ್ಕದ್ದು ನಿಮ್ಮ ಕೆಲಸ ಆದರೆ ಇವತ್ತು ಈ ಕೆಲಸ ಯಾವುದೂ ಕೂಡ ನಡೆದಿಲ್ಲ. ಕೊನೆಗೆ ಏನಾಯಿತು ಎಂದರೆ ಆ ಹೆಣ್ಣು ಮಗಳು ಗುಂಡ್ಲುಪೇಟೆಯಿಂದ ಇಲ್ಲಿಗೆ ಬಂದು, ಬೆಂಗಳೂರಿನಲ್ಲಿರತಕ್ಕ ಸತ್ಯನಾರಾಯಣ್ ಅವರ ಮನೆಯವರು ಇಲ್ಲಿಗೆ ಬಂದು ಅರ್ಜಿ ಕೊಡತಕ್ಕ ಪ್ರಯತ್ನ ಮಾಡಿದರೂ ಕೂಡ ಆ ಅರ್ಜಿಗೆ ಯಾವ ಮನ್ನಣೆಯೂ ಸಿಗಲಿಲ್ಲ. ಸಮಾಧಾನಕರವಾದ ಉತ್ತರ ಕೂಡ ಸಿಗಲಿಲ್ಲ. ಹೀಗಾದರೆ ಏನಾಗುತ್ತದೆ? ಯಾರು ಕ್ರಿಮಿನಲ್ಸ್ ಇದ್ದಾರೆ ಅಥವಾ ಯಾರು ಇಂತಹ ಒಂದು ಕೆಟ್ಟ ಕೆಲಸವನ್ನು ಮಾಡುತ್ತಾರೆ, ಅವರಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ. ಅದಕ್ಕೆ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡತಕ್ಕವರು ಯಾರು ಎಂದರೆ ಸರ್ಕಾರದವರು. ಅದಕ್ಕೆ ನಾನು ಸ್ಪಷ್ಟವಾಗಿ ಇವತ್ತು ಸರ್ಕಾರದವರಿಗೆ ಕೇಳುತ್ತೇನೆ. ಈ ಎರಡೂ ಇನ್ಸಿಡೆಂಟ್‌ನಲ್ಲಿ ಇದು ನೇರವಾಗಿ ಪ್ರೆಸ್‌ಗೆ ಸಂಬಂಧಪಟ್ಟಿದ್ದುದು. ಏಶಿಯನ್ ಏಜ್ ಪತ್ರಿಕೆ ಇರಬಹುದು ಅಥವಾ ಸತ್ಯನಾರಾಯಣ್ ಅವರ ಕೊಲೆ ಪ್ರಶ್ನೆ ಇರಬಹುದು. ಇವೆರಡೂ ಕೂಡ ಜರ್ನಲಿಸ್ಟ್‌ಗೆ ಸಂಬಂಧಪಟ್ಟಿದ್ದು, ಪತ್ರಕರ್ತರಿಗೆ

ಸಂಬಂಧಪಟ್ಟಿದ್ದು, ಪ್ರೆಸ್‌ಗೆ ಸಂಬಂಧಪಟ್ಟಿದ್ದು. ಅದಕ್ಕಾಗಿ ತಾವು ದಯವಿಟ್ಟು ಇದನ್ನು ಸಿಬಿಐಗೆ ರೆಫರ್ ಮಾಡಬೇಕು. ಏಕೆಂದರೆ ಏಶಿಯನ್ ಏಜ್ ಪತ್ರಿಕೆ ಮೇಲೆ ಯಾರು ಅಟ್ಯಾಕ್ ಮಾಡಿದ್ದಾರೆ ಎಂದು ಕಂಡು ಹಿಡಿಯಬೇಕಾದರೆ ಕೇವಲ ಇವರಿಗೆ ಸಂಬಂಧಪಡುವುದಿಲ್ಲ. ಏಕೆಂದರೆ ಇದರ ಹಿನ್ನೆಲೆ ಏನು ಇದೆ, ಅದೂ ಹೊರ ಬರುವುದಿಲ್ಲ. ಸತ್ಯನಾರಾಯಣ್ ಬಗ್ಗೆ ನಾನು ಈಗಾಗಲೇ ಹೇಳಿದೆ. ರಾಜಕಾರಣಿಗಳು ಅದರಲ್ಲಿ ಇದ್ದಾರೆ ಎನ್ನತಕ್ಕಂಥ ಮಾತು ಪದೇ ಪದೇ ಪತ್ರಿಕೆಯಲ್ಲಿ ಬರುತ್ತಿದೆ. ಬಹಿರಂಗವಾಗಿ ಫೋಟೋಗಳನ್ನು ಹಾಕಿ ಅದರ ಮೇಲೆ ಸ್ಟೋರಿಗಳು ಬಂದಿವೆ. ಮತ್ತು ಅನೇಕ ಕಾರ್ಯಕರ್ತರು ಕೂಡ ನಮಗೆ ಪತ್ರ ಬರೆದಿದ್ದಾರೆ. ಅಪ್ಲಿಕೇಶನ್ ಕೊಟ್ಟಿದ್ದಾರೆ. ಪ್ರೊಸೆಷನ್ ಮಾಡಿದ್ದಾರೆ. ಪುತ್ಥಳಿಯನ್ನು ಸುಟ್ಟಿದ್ದಾರೆ, ಸರ್ಕಾರದವರದ್ದು. ಇದೆಲ್ಲವನ್ನೂ ಪ್ರೊಟೆಸ್ಟ್ ಮಾಡಿದರೂ ಕೂಡ ಸರ್ಕಾರದವರು ಏನು ತಿಳಿದುಕೊಂಡಿದ್ದಾರೆ ಎಂದರೆ ಹೀಗೆಯೇ ಒದರುತ್ತಾರೆ, ಹೇಳುತ್ತಾರೆ, ಹೋಗುತ್ತಾರೆ ಎಂದು ಹೇಳಿ ಯಾರು ಕ್ರಿಮಿನಲ್ಸ್ ಇದ್ದಾರೆ ಅಥವಾ ಯಾರು ಇದರಲ್ಲಿ ಕಾನ್ಸಿರೇಟರ್ಸ್ ಇದ್ದಾರೆ, ಅವರಿಗೆ ರಕ್ಷಣೆ ಕೊಡತಕ್ಕ ಕೆಲಸ ಈಗ ಮಾಡುತ್ತಿದ್ದಾರೆ. ನಾನು ತಮ್ಮ ಮುಖಾಂತರ ಕಳಕಳಿಯಿಂದ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಇದನ್ನು ನೇರವಾಗಿ ತಾವು ಸಿಬಿಐಗೆ ಹಾಕಿ. ಏಕೆಂದರೆ ಇದರ ಹಿಂದೆ ನಮ್ಮ ಗುಲ್ಬರ್ಗಾದಲ್ಲಿ ಒಂದು ಕ್ರಾಂತಿ ಪತ್ರಕೆಯ ಎಡಿಟರ್ ಅವರ ಕೊಲೆ ಆದಾಗ ಆ ಪ್ರಕರಣವನ್ನು ಸಿಬಿಐಗೆ ತಾವು ಕೊಡಬೇಕು ಎಂದಾಗ ಮಾನ್ಯ ರಾಮಕೃಷ್ಣ ಹೆಗಡೆಯವರು ಅದನ್ನು ರೆಫರ್ ಮಾಡಿದರು. ಅದೇ ರೀತಿಯಾಗಿ ತಾವು ಮಾಡಿ. ಏಕೆಂದರೆ ತಮಗೆ ಏನೂ ಹೆದರಿಕೆ ಇಲ್ಲ. ತಮ್ಮವರು ಯಾರೂ ಕೂಡ ಇಲ್ಲ. ಅಥವಾ ತಮ್ಮ ಬ್ಲೆಸ್ಸಿಂಗ್ ಯಾರ ಮೇಲೂ ಇಲ್ಲ ಎಂದಾಗ ತಾವು ಏಕೆ ಹೆದರುತ್ತೀರಿ? ನೇರವಾಗಿ ಸಿಬಿಐಗೆ ಕೊಡಿ. ಸಿಬಿಐ ಏನು ಎನ್‌ಕ್ವೈರಿ ಮಾಡುತ್ತದೆ ನೋಡೋಣ. ಮತ್ತು ನ್ಯಾಯವಾದುದು ಏನು ಇದೆ ಅದು ಹೊರಗೆ ಬರಲಿ. ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸತಕ್ಕದ್ದು ಆಗಲಿ. ಆದ್ದರಿಂದ ನಾನು ಇದರ ಬಗ್ಗೆ ಸಿಬಿಐ ಎನ್‌ಕ್ವೈರಿ ಆಗಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಮತ್ತು ಯಾರು ಆ ಮರ್ಡರ್‌ನಲ್ಲಿ ಅಂದರೆ ಸತ್ಯನಾರಾಯಣ್ ಅವರ ಕೊಲೆ ಪ್ರಕರಣದಲ್ಲಿದ್ದಾರೋ ಅವರಿಗೆ ಸಂಬಂಧಪಟ್ಟಂತಹ ಎಲ್ಲಾ ಜನರನ್ನು ಕೂಡ ಹಿಡಿದು ಹಾಕಬೇಕು. ಏಕೆಂದರೆ ಸತ್ಯಾಂಶ ಹೊರಗೆ ಬರಬೇಕು ಎಂದರೆ ಎಲ್ಲಿ ಇದಕ್ಕೆ ಪ್ರೋತ್ಸಾಹ ನೀಡಿದ್ದಾರೆ ಅವರನ್ನು ಮೊದಲು ನಾವು ಹಿಡಿಯಬೇಕು. ಸುಮ್ಮನೆ ಯಾರೋ ಸಣ್ಣ ಪುಟ್ಟ ಜನರಿಗೆ ಹಿಡಿದು ಹಾಕಿದರೆ ಅವರಿಗೆ ಬೆಂಬಲ ನೀಡತಕ್ಕವರು ಹೋಗಿ ಅವರಿಗೆ ಬಿಡಿಸಿಕೊಂಡು ಬರತಕ್ಕಂತಹ ಕೆಲಸವನ್ನು ಮಾಡುತ್ತಾರೆ. ಅವರು ಮುನಿಸಿಪಲ್ ಕೌನ್ಸಿಲರೇ ಇರಬಹುದು ಅಥವಾ ಯಾರಾದರೂ ಅವರ ವರ್ಕರೇ ಇರಬಹುದು. ಮುನಿಸಿಪಲ್ ಕೌನ್ಸಿಲರ್‌ರೊಬ್ಬರ ಬಗ್ಗೆ ಆಗಲೇ ಪ್ರಸ್ತಾಪವಾಯಿತಲ್ಲಾ. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ಸರ್ಕಾರದವರು ಬಹಳ ಸೀರಿಯಸ್ಸಾಗಿ ತಗೆದುಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಪತ್ರಕರ್ತರ ಬಗ್ಗೆ ನಮಗೆ ಸಾಕಷ್ಟು ಅಭಿಮಾನ ಇದೆ ಎಂದು ಮೊದಲಿನಿಂದ ಈ ಸರ್ಕಾರ ಹೇಳುತ್ತಲೇ ಇದೆ. ಮಾನ್ಯ ನಾಣಯ್ಯನವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಆ ರೀತಿ ಹೇಳುತ್ತಲೇ ಇರುತ್ತಾರೆ. ಆದುದರಿಂದ, ಇಂತಹ ವಿಷಯದಲ್ಲಿ ಸರ್ಕಾರ ಇಂಪಾರ್ಷಿಯಲ್ಲಾಗಿ ಎನ್‌ಕ್ವೈರಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತದ್ದೇನೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೇ, ಆಶ್ಚರ್ಯ ವಿಷಯವೆಂದರೆ ಏಷ್ಯನ್ ಏಜ್ ಪತ್ರಿಕೆಯ ಮೇಲೆ ಹಲ್ಲೆಯಾಗಿ ಇವತ್ತಿಗೆ ಒಂದು ತಿಂಗಳಾಯಿತು. 20 ಜನ ಚಾಕು, ಚೂರಿ ಹಿಡಿದುಕೊಂಡು ಬರುತ್ತಾರೆ, ರಾತ್ರಿ 8.30 ಗಂಟೆಗೆ ಒಳ ನುಗ್ಗುತ್ತಾರೆ, ನೆಲ ಮಾಳಿಗೆಯಲ್ಲಿ ಮತ್ತು ಫಸ್ಟ್ ಫ್ಲೋರ್‌ನಲ್ಲಿ ಪೆಟ್ರೋಲ್ ಹಾಕಿ ಬೆಂಕಿ ಹಚ್ಚುತ್ತಾರೆ, ಅಲ್ಲಿರುವಂತಹ ಸೆಕ್ಯೂರಿಟಿ ಗಾರ್ಡ್ ಮೇಲೆ ಹಲ್ಲೆ ಮಾಡುತ್ತಾರೆ, ಮಂಜುನಾಥ ಎಂಬುವವರು ತಲೆ ಒಡೆದು ಆಸ್ಪತ್ರೆ ಸೇರುತ್ತಾರೆ. ಮತ್ತೊಬ್ಬರಿಗೆ ಘಟನೆಯಲ್ಲಿ ಗಾಯವಾಗಿದೆ. ಮುಖ್ಯ ವರದಿಗಾರರಾದ ಶ್ರೀಕಾಂತ್ ಬಿ.ಆರ್ ಎಂಬುವವರು ಉಸಿರು ಕಟ್ಟಿ ನಂತರ ತುರ್ತು ಚಿಕಿತ್ಸೆಗಾಗಿ ಡೆಪ್ಯುಟಿ ಪೋಲೀಸ್ ಕಮೀಷನರ್‌ರವರ ಕಾರಿನಲ್ಲೇ ಯು.ಬಿ. ಆಸ್ಪತ್ರೆಗೆ ಸೇರುತ್ತಾರೆ. ನಿಮ್ಮ ಸರ್ಕಾರದಲ್ಲಿ ಈ ರೀತಿ ನಡೆಯಬಹುದೇ ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಜನ ನಿಬಿಡವಾದ ಪ್ರದೇಶದಲ್ಲಿ 20 ಜನ ಮೂರು ಆಟೋದಲ್ಲಿ ಬರುತ್ತಾರೆ, ನುಗ್ಗುತ್ತಾರೆ, ಹಲ್ಲೆ ಮಾಡುತ್ತಾರೆ, ಬೆಂಕಿ ಹಚ್ಚುತ್ತಾರೆ, ನಂತರ ಆನಂದವಾಗಿ ಹೊರಟು ಹೋಗುತ್ತಾರೆ. ಅಲ್ಲಿ ನಿಮ್ಮ ಪೋಲೀಸ್ ಸಿಬ್ಬಂದಿಯವರ‍್ಯಾರೂ ಓಡಾಡುತ್ತಿರಲಿಲ್ಲವೇನು? ಇದನ್ನೆಲ್ಲಾ ನೋಡಿದಾಗ ಇದರಲ್ಲಿ ಏನೋ ದೊಡ್ಡ ಪಿತೂರಿ ಇದೆ ಎನಿಸುತ್ತದೆ. ಇದುವರೆಗೂ ಈ ಪ್ರಕರಣದಲ್ಲಿ ಯಾರನ್ನೂ ಬಂಧಿಸಿಲ್ಲ. ಇದಕ್ಕೆ ಸಚಿವ ಸಂಪುಟದ ಒಬ್ಬ ಸದಸ್ಯರ ಬೆಂಬಲ ಇದೆ, ಅದಕ್ಕೆ ಯಾರನ್ನೂ ಹಿಡಿಯುತ್ತಿಲ್ಲ ಎಂದು ಇವತ್ತು ಜನ ಮಾತನಾಡುವ ಸ್ಥಿತಿಗೆ ಬಂದಿದೆ. ನಾನು ಪತ್ರಿಕೆ ತೋರಿಸುತ್ತೇನೆ, ನಾನು ಅದರ ವಿವರಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ನೀವು ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರವನ್ನು ಎತ್ತಿಕೊಂಡು ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಪತ್ರಿಕೆ ಬಗ್ಗೆ ನನಗೆ ಬಹಳ ಗೌರವ ಇದೆ. ಪತ್ರಿಕಾ ವರದಿಗಳಲ್ಲಿ ನೂರಕ್ಕೆ ತೊಂಭತ್ತಾರಷ್ಟು ನಿಜಾಂಶ ಇರುತ್ತದೆ.

ಶ್ರೀ ಎಂ. ಸಿ. ನಾಣಯ್ಯ : ತಾವು ಹಿರಿಯ ಸದಸ್ಯರಿದ್ದೀರಿ. ತಾವು ಏನಾದರೂ ಆಪಾದನೆ ಮಾಡುವುದಾದರೆ ಅದಕ್ಕೆ ದಾಖಲೆಗಳಿದ್ದರೆ ಮಾತ್ರ ತಾವು ಆಪಾದನೆ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದು, ನಿಮಿಷ, ನಾನು ನನ್ನ ಮಾತನ್ನು ಪೂರ್ಣ ಮಾಡುವುದಕ್ಕೆ ಬಿಡಿ. ನಾನೇನು ಹೇಳಲಿಕ್ಕೆ ಹೊರಟಿದ್ದೇನೆ ಎಂದರೆ ಸರ್ಕಾರ ಇದನ್ನು ಹಗುರವಾಗಿ ತೆಗೆದುಕೊಳ್ಳುವುದಾದರೆ, ನಾವು ಸರ್ಕಾರ ಇದೆ ಎಂದು ತಿಳಿದುಕೊಳ್ಳಬೇಕೋ? ಬೇಡವೋ? ಈ ಹಿಂದೆ ಇದೇ ರೀತಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಕಛೇರಿಯ ಮೇಲೆ ಹಲ್ಲೆಯಾಯಿತು, ಈಗ ಈ ಪತ್ರಿಕೆ ಮೇಲೆ ಆಗಿದೆ, ನಾಳೆ ಮತ್ತೊಂದು ಪತ್ರಿಕೆ ಮೇಲೆ ಆಗಬಹುದು. ಗುಂಡ್ಲುಪೇಟೆಯಲ್ಲಿ 'ಪೃಥ್ವಿ' ಪತ್ರಿಕೆ ಸಂಪಾದಕ ಎಸ್.ಆರ್. ಸತ್ಯನಾರಾಯಣನ ಕೊಲೆಯಾದ ಬಗ್ಗೆ ನಿಮ್ಮ ಉತ್ತರದಲ್ಲಿ ಕೊಟ್ಟಿದ್ದೀರಿ. ಕೆಂಚನಹಳ್ಳಿಯಲ್ಲಿ ಗಂಗಾಧರಪ್ಪ ಎಂಬ ಪತ್ರಕರ್ತನ ಕೊಲೆಯಾಯಿತು. ಗುಲ್ಬರ್ಗಾದ 'ಕ್ರಾಂತಿ' ಪತ್ರಿಕೆಯ ಸಿದ್ಧರಾಮೇಶನ ಕೊಲೆಯಾಯಿತು. ಸತ್ಯನಾರಾಯಣರವರ ಕೊಲೆಯ ಬಗ್ಗೆ ಎಲ್ಲಾ

ಕ್ಷೇತ್ರಗಳಲ್ಲಿ ಕೆಲಸ ಮಾಡುವಂತಹ ಪ್ರಮುಖರು ಬಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟು ಅವರ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ ಇವತ್ತು ಎಲ್ಲೋ ಒಂದು ಕಡೆ ವ್ಯವಸ್ಥಿತವಾದ ಸಂಚು ನಡೆಯುತ್ತಿದೆ. ನಿರ್ಭೀತಿಯಿಂದ ಪತ್ರಿಕಾ ಮಾಧ್ಯಮ ಕೆಲಸ ಮಾಡುವುದಕ್ಕೆ ಆಗದಿರುವಂತಹ, ಉಸಿರು ಕಟ್ಟುವಂತಹ ಒಂದು ಪರಿಸ್ಥಿತಿ ನಿರ್ಮಾಣ ಮಾಡುವ ಪ್ರಯತ್ನ ನಡೆದಿದೆ. ಬೆದರಿಕೆ ಒಡ್ಡಿ, ಹಲ್ಲೆ ಮಾಡಿ, ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹ ಪ್ರಯತ್ನ ನಡೆದಿದೆ. ಯಾವುದು ಸತ್ಯ ಇದೆಯೋ ಆ ಸಂಗತಿಯನ್ನು ನಿರ್ಭೀತಿಯಿಂದ ಬರೆಯುವುದಕ್ಕೆ ಆಗದಿರುವಂತಹ, ಉಸಿರು ಕಟ್ಟುವಂತಹ ಒಂದು ಪರಿಸ್ಥಿತಿಗೆ ಪತ್ರಕರ್ತರನ್ನು ತಳ್ಳಲಾಗುತ್ತಿದೆ. ಈ ಪ್ರಕರಣದಲ್ಲಿ ಸರ್ಕಾರ ಇದುವರೆಗೆ ಯಾರನ್ನೂ ಬಂಧಿಸಿಲ್ಲ. ನಮ್ಮ ಪೋಲೀಸ್ ಅಧಿಕಾರಿಗಳು ಜೈಪುರಿಯಾ ಘಟನೆಯಲ್ಲಿ ಆರೋಪಿಗಳನ್ನು ಹಿಡಿದು ಇಡೀ ರಾಜ್ಯದ ಗೌರವಕ್ಕೆ ಪಾತ್ರರಾಗಿರುವಂತಹ ಈ ಸಂದರ್ಭದಲ್ಲಿ, ಇಲ್ಲಿ ಯಾವುದೋ ಒಂದು ಪಿತೂರಿ, ಕಾಣದ ಕೈ ಅಲ್ಲಿ ಕೆಲಸ ಮಾಡದಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಇಂತಹ ಪ್ರಮುಖವಾದಂತಹ ವಿಷಯ ಇಂದು ಚರ್ಚೆಗೆ ಬರುತ್ತದೆ ಎಂದು ಗೊತ್ತಿದ್ದರೂ ಸಹ ಇವತ್ತು ಮಾನ್ಯ ಗೃಹ ರಾಜ್ಯ ಸಚಿವರಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲಿ ಸದನದಲ್ಲಿ ಹಾಜರಿಲ್ಲ. ಮಾನ್ಯ ನಾಣಯ್ಯನವರು ಈ ಬಗ್ಗೆ ಉತ್ತರ ಕೊಡಬಾರದು ಎಂದು ನಾನೇನು ಹೇಳುವುದಿಲ್ಲ. ಆದರೆ ಇಂತಹ ಒಂದು ಗಂಭೀರವಾದಂತಹ ವಿಷಯ ಇಲ್ಲಿ ಚರ್ಚೆಯಾಗುತ್ತಿರುವಂತಹ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ಗೃಹ ರಾಜ್ಯ ಸಚಿವರಲ್ಲಿ ಒಬ್ಬರಾದರೂ ಸದನದಲ್ಲಿ ಹಾಜರಿಲ್ಲ. ನೀವು ಎಷ್ಟು ಹಗುರವಾಗಿ ಈ ಸದನವನ್ನು ತೆಗೆದುಕೊಂಡಿದ್ದೀರಿ ಎಂಬುದಕ್ಕೆ ಇದೊಂದು ಉದಾಹರಣೆ.

ಶ್ರೀ ಎಂ. ಸಿ. ನಾಣಯ್ಯ : ಮೇಲ್ಮನೆಯಲ್ಲೂ ಕೂಡ ಇದೇ ವಿಚಾರ ಪ್ರಸ್ತಾಪವಾಗುವುದರಿಂದ ಮಾನ್ಯ ಗೃಹ ರಾಜ್ಯ ಸಚಿವರು ಆ ಸದನದಲ್ಲಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಲ್ಲೂ ಚರ್ಚೆ ನಡೆಯಲಿ, ಆದರೆ ಇಲ್ಲಿ ಒಬ್ಬರಾದರೂ ಇರಬೇಕಲ್ಲ. ಈ ಸದನದಲ್ಲಿ ಇರಬೇಕಾದ ಜವಾಬ್ದಾರಿ ಅವರಿಗೆ ಇಲ್ಲವೇ?

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಗೃಹ ರಾಜ್ಯ ಸಚಿವರು ಮೇಲ್ಮನೆಯಲ್ಲಿದ್ದಾರೆ. ಈ ಚರ್ಚೆಗೆ ಉತ್ತರ ಕೊಡಲು ನಾನಿಲ್ಲಿ ಕುಳಿತಿದ್ದೇನೆ. ದಯವಿಟ್ಟ ತಾವು ಚರ್ಚೆ ಮುಂದುವರೆಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಿ ಇದರ ಮಹತ್ವ ಇಲ್ಲವೆಂದು ತಾವು ಹೇಳುವುದಾದರೆ ನಾನೇನೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆಡಳಿತ ನಡೆಸುವವರು ಈ ರೀತಿ ಪತ್ರಕರ್ತರ ಬಾಯಿ ಮುಚ್ಚಿಸುವಂಥಾದ್ದು ಇವತ್ತು ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಗಳು ಈ ಘಟನೆಯನ್ನು 'ಹೀನ ಕೃತ್ಯ' ಎಂದು ಕರೆದರು. ಅಂದರೆ ಇದರ ಅರ್ಥವೇನು? ಇವತ್ತು ಒಳ ನುಗ್ಗಿ, ಬೆಂಕಿ ಹಚ್ಚಿ ಅಲ್ಲಿದ್ದಂತಹ ಕಂಪ್ಯೂಟರ್, ಮೇಜು, ಕುರ್ಚಿಗಳೆಲ್ಲವನ್ನೂ ಬೆಂಕಿ ಹಚ್ಚಿ ಹಾಳು ಮಾಡಿ ಸರ್ವನಾಶ ಮಾಡಿ ಹೋದಂತಹ ವ್ಯಕ್ತಿಗಳನ್ನು ನಿಮಗೆ ಹಿಡಿಯುವುದಕ್ಕೆ ಆಗುವುದಿಲ್ಲ ಎಂದು ಹೇಳುವುದಾದರೆ ಇವತ್ತು ಈ ರಾಜ್ಯದ ಜನರಿಗೆ ರಕ್ಷಣೆ ಕೊಡಲು ಈ ಸರ್ಕಾರಕ್ಕೆ ಸಾಧ್ಯವೇ? ಕಾನೂನು ಮತ್ತು ಸುವ್ಯವಸ್ಥೆಯನ್ನು

ಸರಿಯಾಗಿ ನೋಡಿಕೊಳ್ಳುವಂಥಾದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ನಮ್ಮ ಪೋಲೀಸ್ ಅಧಿಕಾರಿಗಳಿಗೆ ಶಕ್ತಿಯಿಲ್ಲವೆಂದು ನಾನು ಹೇಳುವುದಿಲ್ಲ. ಇದನ್ನು ಮಾಡದಂತೆ ನೋಡಿಕೊಳ್ಳುವ ಕುತಂತ್ರ ಏನಾದರೂ ನಡೆಯುತ್ತಿದೆಯೇ? ಇದರಲ್ಲಿ ಯಾರದಾದರೂ ಕೈವಾಡ ಏನಾದರೂ ಇದೆಯೇ? ಎನ್ನುವಂತಹ ಸಂಶಯ ಈ ರಾಜ್ಯದ ಜನರಲ್ಲಿ ಇವತ್ತು ಮೂಡಿದೆ. ಸ್ವಾಮಿ, ಅವರು ಬಂದರು, ಬೆಲೆ ಬಾಳುವಂತಹ ಕಂಪ್ಯೂಟರ್‌ಗಳು, ಪೀಠೋಪಕರಣಗಳು ಮತ್ತು ಪುಸ್ತಕಗಳನ್ನೆಲ್ಲಾ ಬೆಂಕಿಗೆ ಹಾಕಿ ಸುಟ್ಟರು. ನಾಲ್ಕು ದ್ವಿಚಕ್ರ ವಾಹನಗಳೂ ಸಹ ಸುಟ್ಟು ಹೋಗಿವೆ. ಸೆಕ್ಯೂರಿಟಿ ಸಿಬ್ಬಂದಿ ಮೇಲೆ ಹಲ್ಲೆಯಾಗಿದೆ. ಇಷ್ಟೆಲ್ಲಾ ಮಾಡಿ ದುಷ್ಕರ್ಮಿಗಳು ಆನಂದವಾಗಿ ಹೊರಟು ಹೋಗುತ್ತಾರೆ. ಯಾರೂ ಕೂಡ ಅವರನ್ನು ಹಿಡಿಯುವುದಿಲ್ಲ. ಇದುವರೆಗೆ ಯಾರನ್ನೂ ಹಿಡಿದಿಲ್ಲ. ಆ ಬಗ್ಗೆ ನಿಮಗೆ ಸುಳಿವೂ ಸಿಕ್ಕಿಲ್ಲ. ಈ ಪರಿಸ್ಥಿತಿಯಲ್ಲಿ ಇವತ್ತು ಈ ಸರ್ಕಾರ ಈ ಘಟನೆಯನ್ನು ತುಂಬಾ ಹಗುರವಾಗಿ ತೆಗೆದುಕೊಂಡಿದೆ. ಈ ಪತ್ರಿಕೆಯ ಮುಖ್ಯ ಸಂಪಾದಕರಾದ ಎಂ.ಸಿ. ಅಕ್ಬರ್‌ರವರು ಹೇಳಿದಂತೆ ಜುಲೈ 3 ಮತ್ತು 5ರ ಸಂಚಿಕೆಗಳಲ್ಲಿ ಇಸ್ರೇಲ್ ದೇಶದಲ್ಲಿ ಯಾವುದೋ ಕೋಮು ಪ್ರಚೋದನೆ ಬಗ್ಗೆ ಪೋಸ್ಟರ್ ಹಚ್ಚಿದ್ದನ್ನು ಕಾರ್ಟೂನ್ ಸುದ್ದಿಯಾಗಿ ಪ್ರಕಟಿಸಿದ್ದಾರೆ. ಭಾರತದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲೂ ಈ ಕಾರ್ಟೂನ ಮತ್ತು ಇದರ ವಿವರಗಳು ಪ್ರಕಟವಾಗಿವೆ. ಹೀಗಿದ್ದರೂ ಸಹಾ ಈ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇನ್ನು 5.6.97ರಂದು ಪತ್ರಕರ್ತ 'ಪೃಥ್ವಿ' ಪತ್ರಿಕೆಯ ಸಂಪಾದಕ ಸತ್ಯನಾರಾಯಣರವರ ಕೊಲೆ ಬರ್ಬರ ರೀತಿಯಲ್ಲಿ ಆಯಿತು. ಈ ಬಗ್ಗೆ ತನಿಖೆಗೆ ತಾವು ಸಿ.ಓ.ಡಿಗೆ ವಹಿಸಿದ್ದೀರಿ. ಜಿಲ್ಲೆಯ ಅಡಿಷನಲ್ ಎಸ್ಪಿ ರಾಣೆಯವರ ನೇತೃತ್ವದಲ್ಲಿ ತನಿಖೆ ನಡೆಯಿತು. ಸತ್ಯಾಂಶ ಹೊರ ಬರುವಂತಹ ಕಾಲದಲ್ಲಿ ಅವರು ಯಾರನ್ನು ಬಂಧನ ಮಾಡಬೇಕೆಂದು ಹೇಳುವಂತಹ ಒಂದು ತೀರ್ಮಾನಕ್ಕೆ ಬರುವ ಹಂತದಲ್ಲಿ ನೀವು ಇದನ್ನು ಸಿ.ಓ.ಡಿಗೆ ವಹಿಸಿದಿರಿ. ಇದರಲ್ಲಿ ಅಲ್ಲಿಯ ಶಾಸಕರ ಕೈವಾಡ ಇದೆ ಎಂಬ ಸುದ್ದಿ ಇದೆ. ಈ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ, ಆ ರೀತಿ ಜನ ಇವತ್ತು ಮಾತನಾಡಿಕೊಳ್ಳುತ್ತಿದ್ದಾರೆ. ಇದರಲ್ಲಿ ಮುಚ್ಚಿಡುವಂತಹ ಸಂಗತಿ ಏನೂ ಇಲ್ಲ.

ಶ್ರೀ ಹೆಚ್.ಎಸ್. ಮಹಾದೇವ್ ಪ್ರಸಾದ್ : ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಮಾನ್ಯ ಶಾಸಕರು ಒಂದು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಅವರೇನು ಹೇಳುತ್ತಾರೋ ಕೇಳೋಣ, ಒಂದು ನಿಮಿಷ ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಎಸ್. ಮಹಾದೇವ್ : ಮಾನ್ಯ ಉಪಾಧ್ಯಕ್ಷರೇ, ಪತ್ರಕರ್ತ ಸತ್ಯನಾರಾಯಣರ ಕೊಲೆ ಪ್ರಕರಣದ ಬಗ್ಗೆ ವಿರೋಧ ಪಕ್ಷದ ಮಾನ್ಯ ಹಿರಿಯ ಸದಸ್ಯರು ಮಾತನಾಡುತ್ತಿದ್ದಾರೆ. ಆದರೆ, ಅವರು ಈ ಪ್ರಕರಣದಲ್ಲಿ ಶಾಸಕರ ಪಾತ್ರದ ಬಗ್ಗೆ ಮಾತನಾಡುತ್ತಿರುವುದರಿಂದ ನಾನು ಗುಂಡ್ಲುಪೇಟೆ ಶಾಸಕನಾಗಿ ಎರಡು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. 7ನೇ ತಾರೀಖು ಆ ಪತ್ರಕರ್ತನ ಕೊಲೆಯಾಗಿದೆ ಎಂದು ಪತ್ತೆಯಾಯಿತು. ಆ 7ನೇ ತಾರೀಖಿನಂದು ನಾನು ವಿಷಯ ಸಮಿತಿಯ ಸಭೆಯಲ್ಲಿರುವಾಗ ಬೇರೆಯವರಿಗೆ ಆ ವಿಚಾರ ಗೊತ್ತಾದಂತೆ ನನಗೂ ಆ ವಿಚಾರ ಗೊತ್ತಾಗಿದೆ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದು ಗೊತ್ತಾಗಲಿಲ್ಲ.

ಉಪಾಧ್ಯಕ್ಷರು : ಅವರು ಹೇಳುತ್ತಾರೆ, ತಾವು ಕುಳಿತುಕೊಳ್ಳಿ.

ಶ್ರೀ ಶ್ರೀ ಶೈಲಪ್ಪ ವಿರೂಪಾಕ್ಷಪ್ಪ ಬಿದರೂರು : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರ ಮೇಲೆ ವೈಯಕ್ತಿಕವಾದಂತಹ ಆರೋಪಣೆ ಮಾಡಲಾಗಿದೆ. ಅವರು ಹೆಸರು ಹೇಳಿದ್ದರಿಂದ ಅವರು ಮಾತನಾಡುತ್ತಿದ್ದಾರೆ. ಮಾನ್ಯ ಸದಸ್ಯರು ದಯವಿಟ್ಟು ಅಡ್ಡಿಪಡಿಸಬಾರದು.

ಶ್ರೀ ಹೆಚ್. ಎಸ್. ಮಹಾದೇವ್ ಪ್ರಸಾದ್ : ನನ್ನ ಮೇಲೆ ಯಾರಾದರೂ ಆರೋಪ ಮಾಡಿದಾಗ ಅದರ ಬಗ್ಗೆ ನಾನು ಏನಾದರೂ ವಿಚಾರವನ್ನು ಹೇಳುವುದು ಬೇಡವೇ? ನಾನು ಸದನದ ಸದಸ್ಯನಾಗಿ ಈ ಬಗ್ಗೆ ಒಂದೆರಡು ವಿಚಾರ ಹೇಳಲೇಬೇಕಾಗುತ್ತದೆ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಶಾಸಕರು ತಮ್ಮ ವಿವರಣೆ ಕೊಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಅವರು ಪಾಯಿಂಟ್ ಆಫ್ ಆರ್ಡರ್ ಎಂದು ಎದ್ದು ನಿಂತರಲ್ಲ, ಆ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದನ್ನು ಅವರು ಹೇಳಲಿ ಎಂದು ನಾನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಸತ್ಯನಾರಾಯಣರವರ ಕೊಲೆಗೆ ಸಂಬಂಧಪಟ್ಟ ಹಾಗೆ ಪತ್ರಿಕೆಯಲ್ಲಿ ಈ ತರಹ ಕೆಲವೊಂದು ವಿಚಾರಗಳನ್ನು ಹೇಳಿದ್ದಾರೆ ಎನ್ನತಕ್ಕ ಮಾತನ್ನು ಸದನದಲ್ಲಿ ಹೇಳಿದರು. ಅಲ್ಲಿಯ ಶಾಸಕರೂ ಸಹ ಇದರಲ್ಲಿ ಭಾಗಿಗಳಾಗಿದ್ದಾರೆ ಎಂದು ಸ್ಥಳೀಯ ಪತ್ರಿಕೆಯಲ್ಲಿ ಬಂದಿದೆ ಎಂದು ಮಾನ್ಯ ಯಡಿಯೂರಪ್ಪ ನವರು ಹೇಳುತ್ತಿದ್ದಾರೆ. ಈ ಸದನದಲ್ಲಿ ಆ ಘಟನೆ ನಡೆದ ಸ್ಥಳದ ಶಾಸಕರು ಎಂದು ನೀವು ಹೇಳಿದಾಗ ಅದು ಮಾನ್ಯ ಮಹಾದೇವ ಪ್ರಸಾದ್‌ರವರಿಗೇ ಅನ್ವಯಿಸುತ್ತದೆ. ಪತ್ರಿಕೆಯಲ್ಲಿ ಈ ತರಹ ಬಂದಿರತಕ್ಕ ವಿಚಾರವನ್ನು ಮಾನ್ಯ ಯಡಿಯೂರಪ್ಪನವರು ಸದನದಲ್ಲಿ ಪ್ರಸ್ತಾಪಿಸಿ ಇದರಲ್ಲಿ ಶಾಸಕರ ಪಾತ್ರ ಉಂಟು ಎಂಬ ಮಾತನ್ನು ಹೇಳಿದಾಗ ಶಾಸಕರಾದ ಅವರೂ ಸಹಾ ಸ್ವಲ್ಪ ಮಟ್ಟಿಗೆ ತಮ್ಮ ಸ್ವಂತ ವಿವರಣೆಯನ್ನು ಈ ಬಗ್ಗೆ ಕೊಡಬೇಕಾಗುತ್ತದೆ. ಈ ಪ್ರಕರಣ ಇವತ್ತು ತನಿಖೆಯ ಹಂತದಲ್ಲಿ ಇದೆ. ತಾವು ದಯವಿಟ್ಟು ಚರ್ಚೆ ಮುಂದುವರೆಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನಾನೇನು ಹೇಳಿದೆ, ನಾನೇನೂ ಆರೋಪ ಮಾಡಲಿಲ್ಲ. ಈ ಎಲ್ಲಾ ಸತ್ಯ ಸಂಗತಿಗಳು ಹೊರ ಬರಬೇಕಾದರೆ ನಿಮ್ಮ ಸಿ.ಓ.ಡಿಯಿಂದ ಸಾಧ್ಯವಿಲ್ಲ. ಏಕೆಂದರೆ ಜಿಲ್ಲೆಯ ಅಡಿಷನಲ್ ಎಸ್ಪಿ ರಾಣೆಯವರ ನೇತೃತ್ವದಲ್ಲಿ ತನಿಖೆ ನಡೆದಂತಹ ಸಂದರ್ಭದಲ್ಲಿ ಸತ್ಯಾಂಶ ಹೊರ ಬರುವಂತಹ ಕಾಲದಲ್ಲಿ ನೀವು ಅದನ್ನು ಮುಚ್ಚಿ ಹಾಕಬೇಕು ಅಥವಾ ತಿರುಚಿ ಹಾಕಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ ಎಂದು ಜನ ಮಾತನಾಡುವಂತಹ ಪರಿಸ್ಥಿತಿ

ಬಂದಿದೆ. ಆ ಸಂದರ್ಭದಲ್ಲಿ ಇದನ್ನು ಸಿ.ಓ.ಡಿಗೆ ವಹಿಸಿದ್ದೀರಿ. ತುಂಬಾ ಸಂತೋಷ. ಈಗ ಎಲ್ಲಾ ರೀತಿಯ ಪ್ರತಿಭಟನೆ ಆ ಭಾಗದಲ್ಲಿ ಆಗಿದೆ. ಇವರೊಬ್ಬ ಪತ್ರಕರ್ತರಾದುದರಿಂದ ಜುಲೈ 3, 1997ರಂದು ತಾವು ಹೊರಡಿಸಲಿದ್ದ 'ಪೃಥ್ವಿ' ಪತ್ರಿಕೆಗೆ ತನಿಖಾ ವರದಿಗಳನ್ನು ಸಿದ್ಧಪಡಿಸಲು ಜೂನ 2ರಂದೇ ಬೆಂಗಳೂರಿನಿಂದ ಗುಂಡ್ಲುಪೇಟೆಗೆ ಸೇರಿದ ಸತ್ಯನಾರಾಯಣರವರು ಮತ್ತೆ ಜೂನ್ 6ರಂದು ಗೋಚರಿಸಿದರು. ಗುಂಡ್ಲುಪೇಟೆಯಿಂದ ಮೂರು ಕಿ.ಮೀ. ದೂರದಲ್ಲಿ ಕಲ್ಲಿಕೋಟೆ ರಸ್ತೆಯಲ್ಲಿ ಅವರು ಶವವಾಗಿ ಬಿದ್ದಿದ್ದರು. ಗುಂಡ್ಲುಪೇಟೆಗೆ ಸತ್ಯನಾರಾಯಣರವರು ಸ್ಥಳೀಯ ಪತ್ರಕರ್ತ ಮತ್ತು ಛಾಯಾಚಿತ್ರಗ್ರಾಹಕರಾದ ವೇಣುಗೋಪಾಲರವರ ಮೂಲಕ ಬಂಡೀಪುರ ಅರಣ್ಯದಲ್ಲಿ ಲೂಟಿಯಾಗುತ್ತಿರುವ ತೇಗದ ಮರಗಳ ಬಗ್ಗೆ ಇನ್ನಷ್ಟು ತನಿಖಾ ವರದಿಗಳನ್ನು ರೆಡಿ ಮಾಡುವ ಉದ್ದೇಶದಿಂದ ಅವರು ಹೋಗಿದ್ದರು. ಸತ್ಯನಾರಾಯಣರವರು ಮೇಣುಗೋಪಾಲ್‌ನನ್ನು ಅಲ್ಲೇ ಬಿಟ್ಟು ಸ್ಕೂಟರ್‌ನಲ್ಲಿ ಸ್ಥಳೀಯ ಕೌನ್ಸಿಲರ್ ನಾಗೇಂದ್ರ ಅವರ ಮುಖಾಂತರ ಸಾಮಿಲ್‌ನ ಫೋಟೋ ತೆಗೆಯಲು ಹೋದರು, ಆ ಬಳಿಕ ಸತ್ಯನಾರಾಯಣರವರು ಹಿಂತಿರುಗಲೇ ಇಲ್ಲ.

5.40 ಪಿ.ಎಂ.

ಅಂದರೆ ಇಲ್ಲಿ ಎರಡುಮೂರು ಸಂಗತಿಗಳು ಕಂಡುಬರುತ್ತವೆ. ಮೊದಲನೆಯದಾಗಿ ಸ್ಥಳೀಯ ಪ್ರಭಾವಿ ಕೌನ್ಸಿಲ್‌ರುಗಳ ಪ್ರಭಾವ ಇದೆಯೆಂದು ಅವರ ಕೈವಾಡ ಇದೆಯೆನ್ನುವ ಮಾತು ಇದೆ. ಎರಡನೆಯದಾಗಿ, ಅರಣ್ಯಕ್ಕೆ ಸಂಬಂಧಪಟ್ಟಂಥ ಮರಗಳನ್ನು ಲೂಟಿಯಾಗುತ್ತಿದ್ದಂಥ ವ್ಯವಸ್ಥೆಗಳನ್ನು ತೋರಿಸಲು ಅಲ್ಲಿಗೇ ಹೋಗಿ ಫೋಟೋಗಳನ್ನು ತೆಗೆದು ಅದನ್ನು ಬಹಿರಂಗ ಮಾಡಬೇಕೆನ್ನುವ ಉದ್ದೇಶ ಅವರಲ್ಲಿತ್ತು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಈಗ ನೀವು ನಾಗೇಂದ್ರ ಎನ್ನುವವನನ್ನು ಏನು ಹಿಡಿದಿದ್ದೀರಾ ಅವನ ಮನೆಯಲ್ಲಿ ಇವನ ಕ್ಯಾಮರಾ ಸಿಕ್ಕಿದೆ ಎನ್ನುವಂಥ ಸಂಗತಿ ವರದಿಯಾಗಿದೆ. ಈ ಎಲ್ಲಾ ಸಂಗತಿಗಳು ಇರುವಂಥ ಸಂದರ್ಭದಲ್ಲಿ ನಾನು ಯಾರನ್ನೋ ನಿರಪರಾಧಿಗಳನ್ನು ಅಪರಾಧಿ ಮಾಡುವುದಕ್ಕಾಗಲೀ ಅಥವಾ ಇದರಲ್ಲಿ ರಾಜಕಾರಣ ಬೆಳೆಸುವುದಕ್ಕಾಗಲೀ ನಾನಂತೂ ಇಷ್ಟಪಡುವುದಿಲ್ಲ. ನಾನು ಇಷ್ಟನ್ನು ಹೇಳಬಯಸುತ್ತೇನೆ, ಇಲ್ಲಿ ಪ್ರಮುಖವಾಗಿರತಕ್ಕಂಥ ಸಂಗತಿಯೇನೆಂದರೆ ಇಲ್ಲಿ ಒಬ್ಬ ಪತ್ರಕರ್ತ, ಸಂಪಾದಕನ ಕೊಲೆಯಾಗಿದೆ. ಈ ರೀತಿ ಕೊಲೆಯಾದರೆ ಪತ್ರಕರ್ತರು ಇನ್ನಾವುದಾದರೂ ಇಂಥ ಘಟನೆಗಳ ಬಗ್ಗೆ ಇನ್‌ವೆಸ್ಟಿಗೇಶನ್ ಮಾಡುವ ಪ್ರವೃತ್ತಿ ಅವರದ್ದೇನಿದೆ ಆ ಕಾರ್ಯವನ್ನು ಅವರು ಮಾಡುವುದಕ್ಕೆ ಹೋಗುತ್ತಾರೆಯೇ? ಅವರಿಗೆ ರಕ್ಷಣೆ ಇಲ್ಲ ಎನ್ನುವುದಾದರೆ ಜನರು ಬದುಕುವುದಕ್ಕೆ ಹೇಗೆ ಸಾಧ್ಯ? ಆ ಕ್ಷೇತ್ರದಲ್ಲಿ ಇವರು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ. ಈ ರೀತಿಯಿರುವುದರಿಂದ ನೀವು ಪ್ರಾಮಾಣಿಕವಾಗಿದ್ದರೆ, ಸತ್ಯ ಸಂಗತಿಗಳು ಹೊರಬರಬೇಕು ಮತ್ತು ಇದರಲ್ಲಿ ನಿಷ್ಪಕ್ಷಪಾತವಾದ ತನಿಖೆಯಾಗಬೇಕೆಂದರೆ ನೀವು ಸಿ.ಬಿ.ಐಗೆ ಇದನ್ನು ವಹಿಸಬೇಕು. ಇವೊತ್ತು ಏಶಿಯನ್ ಏಜ್ ಪತ್ರಿಕೆ ಕಛೇರಿ ಮೇಲೆ ನಡೆದ ಹಲ್ಲೆ ಇರಬಹುದು, ಸತ್ಯನಾರಾಯಣ್ ಕೊಲೆ ಇರಬಹುದು, ಒಂದು ಕ್ಷಣ ಕೂಡ ತಡ ಮಾಡದೆ ನೀವೇ ವಾಲೆಂಟರಿಯಾಗಿ ಸರ್ಕಾರದ ನಡವಳಿಕೆ ಬಗ್ಗೆಯೇ ಅನುಮಾನ ಪಡತಕ್ಕಂಥ ರೀತಿಯಲ್ಲಿ ಜನರು ಮಾತನಾಡತಕ್ಕಂಥ ಕಾಲದಲ್ಲಿ ಸಿಬಿಐಗೆ ಇದನ್ನು ವಹಿಸಬೇಕಾಗುತ್ತದೆ.

ನೀವು ಹೇಳಬಹುದು ಏಕೆ ಇಲ್ಲಿ ವಿಶ್ವಾಸವಿಲ್ಲವೆ ಎಂದು, ಇವೊತ್ತು ಪತ್ರಿಕೆಯವರು ಯಾರ ಬಗ್ಗೆ ವಿಶ್ವಾಸ ಇಡಬೇಕೋ, ಯಾರ ಬಗ್ಗೆ ವಿಶ್ವಾಸ ಇಡಬಾರದೋ ಎನ್ನುವಂಥ ಅನುಮಾನ ಬಂದಿರುವಂಥ ಪರಿಸ್ಥಿತಿ ಇದ್ದರೂ ಸಹ ಇಲ್ಲಿ ರಾಜ್ಯ ಸರ್ಕಾರದ ಪ್ರಮುಖರ ಕೈವಾಡವಿರಬಹುದು ಎನ್ನುವ ಅನುಮಾನ ಬರುವಂಥ ಸಂದರ್ಭದಲ್ಲಿ ನಾನು ಇವೊತ್ತು ಈ ಎರಡೂ ವಿಷಯಗಳ ಬಗ್ಗೆ ಒತ್ತಾಯಪೂರ್ವಕವಾಗಿ ದಯಮಾಡಿ ಸಿ.ಬಿ.ಐ.ಗೆ ವಹಿಸಬೇಕೆಂದು ಹೇಳುತ್ತಿದ್ದೇನೆ. ಇನ್ನು ನನಗೆ ಇವೊತ್ತಿನ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನನಗೆ ಅರ್ಥವಾಗದೆ ಇರುವ ಸಂಗತಿಯೆಂದರೆ, ಈ ರೀತಿ ನಿರ್ಭೀತಿಯಿಂದ, ಇಂದು ನಾವು ಯಾವ ಪತ್ರಿಕಾ ರಂಗಕ್ಕೆ ಮಹತ್ವವನ್ನು ಕೊಟ್ಟಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಕ್ಕೆ ಎಷ್ಟು ಮಹತ್ವ ಇದೆ ಅಷ್ಟೇ ಮಹತ್ವವನ್ನು ಪತ್ರಿಕಾರಂಗಕ್ಕೆ ಇವೊತ್ತು ಕೊಟ್ಟಿರುವಂಥ ಕಾಲದಲ್ಲಿ ಈ ರೀತಿ ಒಂದರ ಮೇಲೆ ಒಂದರಂತೆ ಪತ್ರಕರ್ತರ ಕೊಲೆಯಾಗುತ್ತಿದೆ. ಇವೊತ್ತು ಮೂರನೇ ಘಟನೆಯನ್ನು ನಾನು ನಿಮಗೆ ಉದಾಹರಣೆ ಕೊಡುತ್ತಿದ್ದೇನೆ, ಇವರು ಸತ್ತರೆ ಇವರ ಕುಟುಂಬದವರ ಬಗ್ಗೆ ಮುತುವರ್ಜಿ ತೆಗೆದುಕೊಳ್ಳುವವರು ಯಾರು ಇಲ್ಲವೆ? ಇವೊತ್ತು ನೀವು ನಿಮ್ಮ ಇನ್‌ಫರ್ಮೇಶನ್ ಡಿಪಾರ್ಟ್‌ಮೆಂಟ್‌ನಿಂದ ಇವರ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಿ ಪತ್ರಿಕಾ ಕ್ಷೇತ್ರದಲ್ಲಿ ಇಂಥ ಕುಟುಂಬದವರು ಯಾರು ಈ ರೀತಿಯ ಸಾವನ್ನು ಹೊಂದುತ್ತಾರೆ ಆ ಕುಟುಂಬದವರಲ್ಲಿ ಒಬ್ಬರಿಗೆ ಒಂದು ಉದ್ಯೋಗ ಕೊಡಬೇಕು, ಸತ್ತಂಥ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ಕೊಡಬೇಕು. ನೀವು ಬೇರೆ ಸಂದರ್ಭಗಳಲ್ಲಿ ವ್ಯಕ್ತಿ ಸತ್ತಂಥ ಸಂದರ್ಭದಲ್ಲಿ ಧಾರಾಳವಾಗಿ 1 ಲಕ್ಷ ರೂಪಾಯಿಗಳ ಪರಿಹಾರ ಕೊಡುತ್ತೀರಿ. ಅದೇ ರೀತಿ ಪತ್ರಕರ್ತರಿಗೆ ಈ ಸಮಾಜದ ಹೊಣೆಗಾರಿಕೆ ಇದೆ ತಾನೆ, ಪತ್ರಕರ್ತರು ತಮ್ಮ ಜವಾಬ್ದಾರಿಯನ್ನು ಇಂದು ನಿರ್ವಹಿಸುತ್ತಿದ್ದಾರೆ ತಾನೆ, ಆದುದರಿಂದ ಇವರಿಗೆ ಏನಾದರೂ ವ್ಯವಸ್ಥೆಯಾಗಲೇಬೇಕಾಗಿದೆ. ಆ ಕಾರಣದಿಂದ ಇಂದು ನಾನು ಒತ್ತಾಯಪೂರ್ವವಾಗಿ ಹೇಳುತ್ತಿದ್ದೇನೆ, ಈ ಕೊಲೆಯಾದಂಥ ವ್ಯಕ್ತಿಯ ಕುಟುಂಬಕ್ಕೆ ನೀವು ಹೇಗೆ ಬೇರೆ ಸಂದರ್ಭಗಳಲ್ಲಿ ಯಾವುದಾದರೂ ವ್ಯಕ್ತಿ ಸತ್ತಗೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡುತ್ತೀರಿ ಅದೇ ರೀತಿಯಲ್ಲಿ ಇವನ ಕುಟುಂಬಕ್ಕೂ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕು. ಅದನ್ನು ನೀವು ಹೇಗೆ ಮಾಡುತ್ತೀರೋ ಮಾಡಿ. ಇದಲ್ಲದೇ ಆತನ ಕುಟುಂಬದ ನಿರ್ವಹಣೆಗೆ ಕುಟುಂಬದ ಯಾರಿಗಾದರೂ ಒಬ್ಬರಿಗೆ ಉದ್ಯೋಗವನ್ನು ಸರ್ಕಾರ ಕೊಡಬೇಕಾದ್ದು ಕರ್ತವ್ಯ. ಅದನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಇಂದು ಒಂದು ಕಿವಿ ಮಾತನ್ನು ನಾನು ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸತ್ಯನಾರಾಯಣ್ ಕೊಲೆಗೆ ಸಂಬಂಧಪಟ್ಟಂತೆ ಏನು ಮಾತುಗಳು ಬರುತ್ತಿವೆಯೆಂದರೆ, ಆತ ತುಂಬಾ ಅನಗತ್ಯವಾದ ವರದಿಗಳನ್ನು ಬರೆಯುತ್ತಿದ್ದ, ಆ ರೀತಿಯ ಸ್ವಭಾವ ಆತನಿಗಿತ್ತು ಎನ್ನುವ ಮಾತಗಳು ಅಲ್ಲಲ್ಲೇ ಕೇಳಿಬರುತ್ತಿದೆ. ಅದಕ್ಕೋಸ್ಕರ ನಾನು ವಿನಂತಿ ಮಾಡುತ್ತಿದ್ದೇನೆ, ಪತ್ರಕರ್ತ ವರದಿಗಾರರಿಗೂ ಸಹ ಒಂದು ಕೋಡ್ ಆಫ್ ಕಂಡಕ್ಟ್ ಇರಬೇಕಾಗುತ್ತದೆ, ಈ ಚಾರಿತ್ರ್ಯಹರಣ ಬೇರೆ ಬೇರೆ ಈ ರೀತಿಯ ಸುದ್ದಿಗಳನ್ನು ಯಾವುದೋ ಮೂಲಗಳಿಂದ ಗೊತ್ತಾದಾಗ ಸರಿ ತಪ್ಪುಗಳನ್ನು ನೋಡಿ ತಾವು ಅದನ್ನು ಮನವರಿಕೆ ಮಾಡಿಕೊಂಡು ಬಂದಮೇಲೆ ಆ ವರದಿಯನ್ನು ಬರೆಯವಂಥದ್ದು ಇಂದು ತುಂಬಾ

ಅಗತ್ಯವಿದೆ. ಆ ರೀತಿಯಲ್ಲಿ ವರದಿ ಬರೆಯುವ ಬಗ್ಗೆ ನಮ್ಮ ಪ್ರೆಸ್ ಅಸೋಸಿಯೇಶನ್‌ನ ಪ್ರಮುಖರು ಯಾರಿದ್ದಾರೆ ಅವರು ಈ ಕಡೆ ಸ್ವಲ್ಪ ಗಮನ ಕೊಟ್ಟರೆ ಇಂದು ಪತ್ರಿಕಾ ಕ್ಷೇತ್ರದಲ್ಲಿ ಏನು ಗೌರವವಿದೆ ಅದು ಇನ್ನೂ ಜಾಸ್ತಿಯಾಗಬಹುದು. ಆ ರೀತಿಯಲ್ಲಿ ಇದಕ್ಕೆ ಏನಾದರೂ ವ್ಯವಸ್ಥೆಯಾಗಬೇಕು. ಇದಲ್ಲದೇ ಇನ್‌ಫರ್ಮೇಶನ್ ಡಿಪಾರ್ಟ್‌ಮೆಂಟ್‌ನವರು ಪತ್ರಕರ್ತ ವರದಿಗಾರ ಈ ರೀತಿಯಲ್ಲಿ ಸಾವನ್ನಪ್ಪಿದಾಗ ಆತನ ಕುಟುಂಬಕ್ಕೆ ರಕ್ಷಣೆ ಮತ್ತು ಪರಿಹಾರ ಕೊಡುವುದಕ್ಕೆ ಸಂಬಂಧಪಟ್ಟಂತೆ ವ್ಯವಸ್ಥೆಯಾಗಬೇಕು. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಕ್ಕೆ ನಿಮ್ಮ ಉತ್ತರ ಏನು ಬರಬಹುದೆಂದು ನಾನು ನಿರೀಕ್ಷೆ ಮಾಡಿದ್ದೇನೆಂದರೆ, ನಾನು ತಿಳಿದುಕೊಂಡಂತೆ ಬಹುಶಃ ಇದನ್ನು ಬಹಳ ಗೌಪ್ಯವಾಗಿಟ್ಟಿರಬಹುದು, ಏಶಿಯನ್ ಏಜ್ ಪತ್ರಿಕಾ ಕಛೇರಿ ಮೇಲೆ ಹಲ್ಲೆ ಮಾಡಿದವರಲ್ಲಿ ಈಗಾಗಲೇ ಕೆಲವರನ್ನು ಬಂಧನದಲ್ಲಿಟ್ಟಿರಬಹುದು, ನಿಮ್ಮದೇ ಆದ ರೀತಿಯಲ್ಲಿ ತನಿಖೆಯನ್ನು ನಡೆಸಿರಬಹುದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಯಾರ್‍ಯಾರನ್ನು ಬಂಧನ ಮಾಡಿದ್ದೀರಿ ಎಂಬ ಬಗ್ಗೆ ತಮ್ಮಿಂದ ಉತ್ತರ ಬರಬಹುದು ಎಂದು ನಾನು ತಿಳಿದುಕೊಂಡಿದ್ದೆ. ನಾನು ಈ ರೀತಿ ಹೇಳಿದ್ದರಿಂದ ನಾಣಯ್ಯನವರು ನನ್ನ ಮೇಲೆ ಬೀಳಬಹುದು, ಏನು ಯಡಿಯೂರಪ್ಪನವರೇ ಜವಾಬ್ದಾರಿಯಿರುವವರು ಈ ರೀತಿ ಮಾತನಾಡುತ್ತಿದ್ದೀರೆಂದು, ಆದರೆ ನಮಗೆ ಬಂದಿರುವ ಸುದ್ದಿಯ ಪ್ರಕಾರ ಹಿಡಿದಿದ್ದಂಥ ವ್ಯಕ್ತಿಗಳನ್ನು ಕೆಲವರು ಇನ್‌ಫ್ಲ್ಯೂಯನ್ಸ್ ಮಾಡಿ ಬಿಡಿಸಿದ್ದಾರೆ ಈ ಸರ್ಕಾರದಲ್ಲಿ ಎಂದು ನನಗೆ ಬಂದಿರುವ ಮಾಹಿತಿ ಪ್ರಕಾರ ಗೊತ್ತಿದೆ. ಆದರೆ ಅದರ ಸತ್ಯಾಸತ್ಯತೆಯನ್ನು ನೀವು ಹೇಳಬೇಕು. ಅದನ್ನು ನಿರ್ಭೀತಿಯಿಂದ ಹೇಳಬೇಕಾದ ನನ್ನ ಕರ್ತವ್ಯವನ್ನು ನಾನು ಇಲ್ಲಿ ಮಾಡಿದ್ದೇನೆ. ಒಂದು ವೇಳೆ ನೀವು ಅವರನ್ನು ಹಿಡಿಯುವುದಕ್ಕೆ ಆಗದಿದ್ದರೆ ನಿಮ್ಮ ಈ ಸರ್ಕಾರ ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಬೆಂಗಳೂರು ನಗರದಲ್ಲಿ ರಾತ್ರಿ 8.30 ಗಂಟೆಯಲ್ಲಿ ಮೂರು ಆಟೋರಿಕ್ಷದಲ್ಲಿ 20 ಜನರು ಬಂದು ಈ ರೀತಿಯಲ್ಲಿ ಧಾಳಿ ಮಾಡಿ ಹೋಗಿರುವವರು ಒಬ್ಬರೂ ಸಿಗುವುದಿಲ್ಲ ಎಂದರೆ ಇದು ಏನನ್ನು ತೋರಿಸುತ್ತದೆಂದರೆ ನಿಮ್ಮ ಪೋಲೀಸ್ ಇಲಾಖೆ, ಗೃಹ ಇಲಾಖೆ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಬಹುಶಃ ಇದರಿಂದ ಅಧಿಕಾರಿಗಳು ತಲೆತಗ್ಗಿಸುವಂಥ ಘಟನೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಅದಕ್ಕೋಸ್ಕರ ನಾನು ಕೇಳುತ್ತಿದ್ದೇನೆ, ಇವರನ್ನು ಇನ್ನೂ ಏಕೆ ಹಿಡಿದಿಲ್ಲ? ಅಥವಾ ಏನಾದರೂ ಸತ್ಯ ಸಂಗತಿ ಇದ್ದಲ್ಲಿ ಒಳಗಡೆ ಸ್ಪೀಕರ್ ರೂಂನಲ್ಲಿ ಏನಾದರೂ ಗುಟ್ಟಾಗಿ ಹೇಳುವಂಥದ್ದು ಇದ್ದರೆ ನಾವು ಅಲ್ಲಿಗೆ ಬಂದು ಅದನ್ನು ಕೇಳುವುದಕ್ಕೆ ನಾವು ಸಿದ್ಧರಿದ್ದೇವೆ. ಆದರೆ, ಇದಂತೂ ನಿಮಗೆ ಶೋಭೆ ತರುವಂಥ ಸಂಗತಿಯಲ್ಲ. ಏಶಿಯನ್ ಏಜ್ ಪತ್ರಿಕೆಯ ಕಛೇರಿಯ ಮೇಲೆ ಹಲ್ಲೆ ನಡೆದಂಥ ಸಂದರ್ಭದ ಬಗ್ಗೆ ವಿಶೇಷವಾದ ಮುತುವರ್ಜಿಯನ್ನು ಈ ಸರ್ಕಾರ ವಹಿಸಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನೊಂದು ಹೇಳುತ್ತೇನೆಯಾದ ಕಾರಣ ದಯಮಾಡಿ ಈ ಎರಡೂ ಘಟನೆಗಳ ಬಗ್ಗೆ ನಿಮ್ಮಿಂದ ಸರಿಯಾಗಿ ತನಿಖೆಯಾಗುವುದಿಲ್ಲ ನಿಮ್ಮಿಂದ ನಿಷ್ಪಕ್ಷಪಾತವಾದ ತನಿಖೆಯಾಗುತ್ತದೆ ಎನ್ನುವ ವಿಶ್ವಾಸ ಇವೊತ್ತು ರಾಜ್ಯದ ಜನತೆಯಲ್ಲಿ ಉಳಿದಿಲ್ಲ. ಅದಕ್ಕಾಗಿ ದಯಮಾಡಿ ಈ ಎರಡೂ ಘಟನೆಗಳ ಬಗ್ಗೆ ತನಿಖೆಗೆ ಸಿ.ಬಿ.ಐಗೆ ಒಪ್ಪಿಸಬೇಕೆಂದು ಒತ್ತಾಯಪೂರ್ವಕವಾಗಿ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, 'ಏಶಿಯನ್ ಏಜ್' ಪತ್ರಿಕಾಲಯ ಇರತಕ್ಕಂಥ ಸ್ಥಳ ಬೆಂಗಳೂರು ನಗರದ ಪ್ರಮುಖ ಸ್ಥಳಾವಾಗಿದೆ. ದರೋಡೆ ರೀತಿಯಲ್ಲಿ ಕಾರ್ಯಾಲಯದ ಮೇಲೆ ಕೃತ್ಯ ನಡೆದಿದೆ. ದರೋಡೆ ಮಾಡತಕ್ಕಂಥ ರೀತಿಯಲ್ಲಿ ಆ ಜನರು ಮೊದಲು ಟೆಲಿಫೋನ್‌ನಲ್ಲಿ ಪತ್ರಿಕೆಯವರ ಮೇಲೆ ಬೆದರಿಕೆಯನ್ನು ಹಾಕಿದ್ದಾರೆ. ಪತ್ರಿಕೆಯವರು ಯಾರೋ ಟೆಲಿಫೋನ್ ಸುಮ್ಮನೇ ಮಾಡಿದ್ದಾರೆಂದು ತಿಳಿದುಕೊಂಡು ಪೋಲೀಸ್‌ಗೆ ಕಂಪ್ಲೆಂಟ್ ಕೊಡದೇ ಸೌಮ್ಯವಾಗಿದ್ದರು. ಆದರೆ ಅಂದು ನೇರವಾಗಿ ಎರಡುಮೂರು ಆಟೋರಿಕ್ಷಾಗಳಲ್ಲಿ ಹಲವಾರು ಜನರು ಬಂದು ಪತ್ರಿಕಾಲಯದೊಳಗೆ ನುಗ್ಗಿ ದಾಂಧಲೆ ಮಾಡಿ ವರದಿಗಾರರ ಮೇಲೆ ಹಲ್ಲೆ ಮಾಡಿ ಬೆಂಕಿ ಹಾಕಿರುವ ದೃಶ್ಯವನ್ನು ನೋಡಿದರೆ ಇವೊತ್ತು ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದುಹೋಗಿದೆ ಎನ್ನತಕ್ಕಂಥ ಪ್ರಶ್ನೆ ನೇರವಾಗಿ ಬರುತ್ತದೆ. ಯಾರನ್ನೂ ಇದರಲ್ಲಿ ಆಕ್ಷೇಪಣೆ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಒಂದು ಪತ್ರಿಕಾ ಕಾರ್ಯಾಲಯಕ್ಕೆ ನೇರವಾಗಿ ನುಗ್ಗಿ ಹಲ್ಲೆ ಮಾಡಿ ಪತ್ರಕರ್ತರ ಮೇಲೆ ಹಲ್ಲೆ ಮಾಡಿ ಬೆಂಕಿ ಹಾಕಿ ಭಯಭೀತರನ್ನಾಗಿ ಮಾಡುವ ಮಟ್ಟದಲ್ಲಿ ಈ ಜನರು ಇಳಿಯ ಬೇಕಾದರೆ ಇದರ ಅರ್ಥವೇನು? ಕಾನೂನು ಮತ್ತು ಸುವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ನೇರವಾಗಿ ಕುಸಿದುಬಿದ್ದಿದೆ ಎನ್ನತಕ್ಕಂಥದ್ದನ್ನು ಹೇಳುವುದನ್ನು ಬಿಟ್ಟರೆ ನಮಗೆ ಬೇರೆ ಮಾರ್ಗವೇ ಇಲ್ಲ. ಮಾನ್ಯ ಉಪಾಧ್ಯಕ್ಷರೇ, ಈ ಘಟನೆ ನಡೆದು ಈಗಾಗಲೇ ಒಂದು ತಿಂಗಳಾಗಿದೆ. ಈ ಬಗ್ಗೆ ತನಿಖೆ ಯಾವ ಹಂತದಲ್ಲಿದೆ? ತನಿಖೆಯನ್ನು ಮಾಡತಕ್ಕಂಥವರು ಯಾರು? ಈ ತನಿಖೆಯನ್ನು ವ್ಯವಸ್ಥೆ ಮಾಡಿದವರು ಯಾರು? ಯಾರ್‍ಯಾರನ್ನು ತಾವು ಇದುವರೆಗೆ ಬಂಧಿಸಿದ್ದೀರಿ? ಈ ಬಂಧಿಸಿದ್ದೀರಿ? ಈ ಬಂಧನದ ವಿವರಗಳೇನು ಎಂಬ ಬಗ್ಗೆ ಈ ಕ್ಷಣದವರೆಗೂ ಗೊತ್ತಿಲ್ಲ. ಇದು ಯಾವ ಮೂಲೆಯಲ್ಲಿ ನಡೆಯಿತು? ಯಾರು ಈ ಪತ್ರಿಕಾಲಯಕ್ಕೆ ನುಗ್ಗಿದವರು ಎನ್ನತಕ್ಕಂಥ ಪ್ರಶ್ನೆ ಇದುವರೆಗೂ ಬರಲಿಲ್ಲ. ನಮ್ಮಲ್ಲೇನೆಂದರೆ ಮಾತೆತ್ತಿದರೆ ಸಿ.ಓ.ಡಿಗೆ ವಹಿಸಿ ಸಿ.ಬಿ.ಐ.ಗೆ ವಹಿಸಿ ಎಂದು ಹೇಳುತ್ತೇವೆ. ಇದು ನಿಜ. ನಾವು ಏಕೆ ಹೀಗೆ ಹೇಳುತ್ತೇವೆಂದರೆ ಸರ್ಕಾರದ ಮೇಲೆ ನಂಬಿಕೆ ಹೋದಮೇಲೆ ಈ ಪ್ರಶ್ನೆ ಬಂದಾಗ ನಾವು ಇವೊತ್ತಿನ ದಿನದಲ್ಲಿ ಬೇರೆ ಮಾರ್ಗವಿಲ್ಲದೇ ನೇರವಾಗಿ ಸಿ.ಬಿ.ಐಗೆ ವಹಿಸಿ ಎಂದು ಹೇಳುತ್ತೇವೆ.

(ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸಿ.ಬಿ.ಐ ಗೆ ವಹಿಸಿದಾಗ ಇದರ ವರದಿ ಬರುವುದು ಯಾವಾಗ? ಈ ಹಿಂದೆ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ ಪತ್ರಿಕಾಲಯದ ಮೇಲೆ ಹಲ್ಲೆ ಮಾಡಿದರು. ಇದರ ಬಗ್ಗೆ ಏನಾಯಿತು ಎಂದು ಇದುವರೆಗೂ ಗೊತ್ತಾಗಲಿಲ್ಲ. ಅನೇಕ ಹೇಳಿಕೆಗಳು ಮತ್ತು ಅನೇಕ ವಿಧವಿಧವಾದ ಬಹಳ ಅಮೂಲ್ಯವಾದ ವಿಚಾರಗಳನ್ನು ಪತ್ರಿಕೆಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ರೀತಿಯಾಗಿ ರಕ್ಷಣೆ ಇಲ್ಲದೇ ಇರತಕ್ಕಂಥ ವ್ಯವಸ್ಥೆಯಲ್ಲಿ ನಿಜವಾಗಿ ನಾವು ಕಾನೂನಿನ ಬಗ್ಗೆ ಸವಾಲನ್ನು ಹಾಕಬೇಕಾದ ಪರಿಸ್ಥಿತಿ ಒಂದು ಕಡೆ ನಿರ್ಮಾಣವಾಗಿದೆ. ನಾನು ಪ್ರಾಮಾಣಿಕವಾಗಿ ಕೇಳುತ್ತಿದ್ದೇನೆ, ಒಂದು ತಿಂಗಳಿನಿಂದ ಇದರ ಬಗ್ಗೆ ಸರ್ಕಾರ ಏನೇನು ಮಾಡಿದೆ ಎಂಬುದನ್ನು ನೇರವಾಗಿ ಇಲ್ಲಿ ಹೇಳಬೇಕು. ಇದಕ್ಕೆ ಕಾರಣಕರ್ತರು ಯಾರು? ಯಾವ ಉದ್ದೇಶದಿಂದ 'ಏಶಿಯನ್ ಏಜ್' ಪತ್ರಿಕಾಲಯದ ಮೇಲೆ ಧಾಳಿ

ಮಾಡಲಾಯಿತು? ಇದರ ಹಿಂದೆ ಇರತಕ್ಕಂಥವರು ಯಾರು ಎನ್ನುವ ಪ್ರಶ್ನೆಗಳು ಬರುತ್ತವೆ. ಇದರ ಜೊತೆಗೆ ಹಲ್ಲೆಗೆ ಒಳಗಾದಂಥ ವ್ಯಕ್ತಿಗೆ ಸರ್ಕಾರದ ಸಾಂತ್ವನ ಏನು? ಸರ್ಕಾರದ ನಿರ್ಧಾರಗಳೇನು? ವಾರ್ತಾ ಇಲಾಖೆಯ ವಿಚಾರಗಳೇನು? ಈ ರೀತಿಯಲ್ಲಿ ಒಂದರ ಮೇಲೆ ಇನ್ನೊಂದು ಪ್ರಶ್ನೆಗಳು ಬರತಕ್ಕಂಥ ಸಂದರ್ಭದಲ್ಲಿ ಸರ್ಕಾರ ಇದರ ಬಗ್ಗೆ ಒಂದು ರೀತಿಯಲ್ಲಿ ಜವಾಬ್ದಾರಿಯುತವಾಗಿ ಈ ವಿಚಾರದಲ್ಲಿ ನಡೆದುಕೊಂಡಿಲ್ಲ. ಇದು ಬಹಳ ಸ್ಪಷ್ಟವಾದ ವಿಚಾರ. ನಾನು 1964ರಿಂದ ರಾಜಕೀಯದಲ್ಲಿ ನಿರಂತರವಾಗಿ ಇದ್ದೇನೆ. ಅನೇಕ ಹೋರಾಟಗಳನ್ನು ಮಾಡಿದ್ದೇನೆ. ನೂರಾರು ಬಾರಿ ಜೈಲು, ಲಾಕಪ್ಪನ್ನು ಅನುಭವಿಸಿದ್ದೇನೆ. ನನ್ನ ಮೇಲೆ ಅನೇಕ ಪತ್ರಿಕೆಗಳು ಅಂದರೆ ಇತ್ತೀಚೆಗೆ ಬಂದಿರತಕ್ಕ ಹೆದರಿಕೆ ಬೆದರಿಕೆ ಬರವಣಿಗೆಯ ಪತ್ರಿಕೆಗಳು ನಿರಾತಂಕವಾಗಿ ಬರೆಯುತ್ತಲೇ ಇವೆ. ದೊಡ್ಡ ದೊಡ್ಡ ಪತ್ರಿಕೆಗಳು ಮಾತ್ರ ಯಾವತ್ತು ನನ್ನ ಅವಹೇಳನ ಮಾಡುವುದಾಗಲೀ, ತೇಜೋವಧೆ ಮಾಡುವುದಾಗಲೀ, ಅಥವಾ ನನ್ನ ಮಾನಹರಣ ಆಗತಕ್ಕಂಥ ಹೇಳಿಕೆಗಳನ್ನು ಇವತ್ತಿಗೂ ಯಾವ ಪತ್ರಿಕೆಗಳು ಬರೆದಿಲ್ಲ. ನಾನು ಅತ್ಯಂತ ಪ್ರಾಮಾಣಿಕವಾಗಿ ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ಅನೇಕ ಸಲ ಟೀಕೆ ಇರಬಹುದು, ಅಥವಾ ಜಾಸ್ತಿ ವರದಿಯನ್ನು ಕೊಡದೆ ಇರಬಹುದು. ಅದನ್ನು ನಾನು ಯಾವತ್ತೂ ಅಲ್ಲಗಳೆದಿಲ್ಲ. 1960ರಿಂದ ನಿರಂತರ ಹೋರಾಟವನ್ನು ಮಾಡಿಕೊಂಡು ಬಂದಿದ್ದೇನೆ. ಸಾವಿರಾರು ಚಳುವಳಿಗಳಲ್ಲಿ ಭಾಗವಹಿಸಿ ಅನೇಕಸಾರಿ ಲಾಕಪ್ಪಿನ ಕಷ್ಟವನ್ನು ಅನುಭವಿಸಿದ್ದೇನೆ. ಇವತ್ತಿನ ಚಳುವಳಿಗಿಂತ ಹೆಚ್ಚಾಗಿ ಅಂದಿನ ಚಳುವಳಿಗಳಲ್ಲಿ ನೇರವಾಗಿ ನಮ್ಮನ್ನು ಬಂಧಿಸಿ ಲಾಕಪ್ಪಿನಲ್ಲಿ ಇಡುತ್ತಿದ್ದರು. ಆಗ ಏನು ಹೊರಗಡೆ ಪ್ರೀತಿಯಿಂದ ಮಾತನಾಡತಕ್ಕ ಮಾತೇ ಅಲ್ಲಿ ಇರಲಿಲ್ಲ. ಪ್ರಕಾಶ್‌ರವರೇ, ಗೌರವ ಕೊಟ್ಟು ಕರೆಯತಕ್ಕ ಪ್ರಶ್ನೆಯೇ ಇರಲಿಲ್ಲ. ಎಂಥ ಸಂದರ್ಭದಲ್ಲೂ ಒಂದು ಹಂತದಲ್ಲಿ ತಮಗೆ ಹೇಳುತ್ತೇನೆ ಅಧ್ಯಕ್ಷರೆ, ಪತ್ರಿಕಾ ಸಂಘದ ಅಧ್ಯಕ್ಷರಾಗಿದ್ದ ಜಯಶೀಲರಾವ್‌ರವರು, ಗಿರಿಶೇಷಪ್ಪ ಇವರೆಲ್ಲಾ ಬಂದು ನಮ್ಮನ್ನು ಬಿಡಿಸಿರತಕ್ಕ ನಿದರ್ಶನ ಇದೆ. ಆದರೆ, ಇತ್ತೀಚಿನ ಕೆಲವು ಪತ್ರಿಕೆಗಳಿಗೆ ನಾನು ವೈಯಕ್ತಿಕವಾಗಿ ನಾನು ಅವರನ್ನು ತೆಗಳುತ್ತಾ ಇಲ್ಲ. ನಾನು ಕಾಫಿ ಕೂಡ ಕುಡಿಯುವುದಿಲ್ಲ. ವಾಟಾಳ್ ನಾಗರಾಜ್ ಗೆಸ್ಟ್ ಹೌಸ್‌ನಲ್ಲಿ ಕುಡಿತಾರೆ ಎಂದು ಬರೆದರು. ಸಧ್ಯ ಅದೊಂದು ಗೌರವ ನಾನು ಇಟ್ಟುಕೊಂಡಿದ್ದೇನೆ. ನನ್ನ ಜೀವನದಲ್ಲಿ ನಾನು ಕುಡಿದೇ ಇಲ್ಲ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ತಾವು ಒಂದು ಮಾತು ಹೇಳಿದಿರಿ, ಅದೊಂದು ಗೌರವ ನಾನು ಇಟ್ಟುಕೊಂಡಿದ್ದೇನೆ, ಎಂದೂ ಕುಡಿಯದವರು ಗೌರವಸ್ತರು ಅಂದರೆ ಕುಡಿಯುವರು ಏನು? ನನಗೆ ಸಮಾಧನ ಆಗಲಿಲ್ಲ ಏಕೆಂದರೆ ನನ್ನ ಜೊತೆ ಅವರು ಬರಲಿಲ್ಲ ಎಂದು.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ರೀತಿ ವಾಟಾಳ್ ನಾಗರಾಜ್ ಗೆಸ್ಟ್‌ಹೌಸ್‌ನಲ್ಲಿ ಕುಡಿದು ಮತ್ತೇರಿ ಮಲಗಿರುತ್ತಾನೆ ಎಂದು ಬರೆದರು. ಈ ಒಂದು ವಿಷಯದಿಂದ ನಮ್ಮ ಮನೆಯಲ್ಲಿ ಜಗಳವೇ ಆಯಿತು. ಸತ್ಯ ಹೇಳುತ್ತೇನೆ. ನಾನು ಅವರಿಗೆ ಇದನ್ನೆಲ್ಲಾ ನಂಬಬೇಡಿ ಎಂದು ಹೇಳಿದೆ.

ಅಧ್ಯಕ್ಷರು : ಮನೆಯಲ್ಲಿ ನಂಬಿಕೆಯನ್ನು ಉಳಿಸಿಕೊಳ್ಳಬೇಕು. ಮನೆಯಲ್ಲಿ ಜಗಳ ಆಗಬಾರದು. ನನ್ನ ಮೇಲೆ ಏನೇ ಬರೆದರೂ ನಮ್ಮ ಮನೆಯಲ್ಲಿ ಜಗಳ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಎರಡು ಬಹಳ ಗಂಭೀರವಾದ ವಿಚಾರ. ನಮ್ಮ ಮೇಲೆ ವೈಯಕ್ತಿಕವಾಗಿ ಏನೇ ದೂರಿದರೂ ಅದನ್ನು ಇನ್ನೊಂದು ವೇಳೆಯಲ್ಲಿ ಚರ್ಚೆ ಮಾಡೋಣ. ಈಗ ಬೇಡ.

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತಿದೆ ಸ್ವಾಮಿ, ತಾವು ದಯವಿಟ್ಟು ಕುಳಿತುಕೊಳ್ಳಿ. ಉದಯವಾಣಿ ಬಗ್ಗೆ ಮಾತನಾಡುವಾಗ ನಾನು ಈ ಮಾತು ಹೇಳಲಿಲ್ಲ. ಈ ಸಂದರ್ಭದಲ್ಲಿ ನಾನು ನಿಮಗೆ ಒಂದು ಮಾತು ಹೇಳುತ್ತೇನೆ. ಈಗ ನಾನೇನು ಅದನ್ನು ತಿರುಗಿಸಿ ಎಲ್ಲಿ ಹೇಳ ಬೇಕು ಅಂತ ಹೇಳುವುದಕ್ಕೆ ಹೋಗುವುದಿಲ್ಲ.ಅಂಥಾದ್ದು ಏನೂ ಇಲ್ಲ ನನಗೆ. ನನಗೆ ಆ ಭಾವನೆ ಇದೆಯೇ ತಾವು ದಯವಿಟ್ಟು ಹೇಳಿ, ಇಲ್ಲ. ನಾನು ಅವರ ಜೊತೆ ಸೇರಿ ಹಗಲು ರಾತ್ರಿ ಹೋರಾಟ ಮಾಡಿರತಕ್ಕ ವ್ಯಕ್ತಿ. ಪತ್ರಕರ್ತರು ನನ್ನ ಮಿತ್ರರು. ಎಲ್ಲಾ ಪತ್ರಕರ್ತರ ಹೆಸರನ್ನು ಪರಿಚಯ ಇಟ್ಟುಕೊಂಡಿರತಕ್ಕ ರಾಜಕಾರಣಿ ನಾನು. ನಾನು ಅತ್ಯಂತ ಪ್ರಾಮಾಣಿಕವಾದ ಪ್ರೀತಿವಿಶ್ವಾಸಗಳನ್ನು ಇಟ್ಟುಕೊಂಡಿದ್ದೇನೆ. ನಾನು ಯಾರಿಗೆ ಹೇಳುತ್ತಿದ್ದೇನೆ ಎಂದರೆ ಇತ್ತೀಚೆಗೆ ಕೆಲವಾರು ಪತ್ರಿಕೆಗಳ ಬಗ್ಗೆ ಹೇಳುತ್ತಿದ್ದೇನೆ. ಈಗ ವಾಟಾಳ್ ನಾಗರಾಜ್ ಕುಡಿತಾರೆ ಎನ್ನತಕ್ಕಂಥ ವಿಷಯ. ಅಧ್ಯಕ್ಷರೆ, ನಾನು ಕುಡಿಯುವುದಾದರೆ ನನಗೆ ಯಾರ ಅಪ್ಪಣೆ ಬೇಕಾಗಿಲ್ಲ. ಕುಡಿಯುವುದು ತಪ್ಪು ಎಂದು ಹೇಳುತ್ತಿಲ್ಲ, ಮಾನ್ಯ ಸಂಸದೀಯ ಸಚಿವರಿಗೆ ಈಗ ಸಮರ್ಥನೆ ಕೊಡುತ್ತಿದ್ದೇನೆ. ಮತ್ತೊಂದು ಕಡೆ ಎಂತಹ ಸಂದರ್ಭದಲ್ಲಿ, ಚುನಾವಣೆ ಸಂದರ್ಭದಲ್ಲಿ ವಾಟಾಳ್ ನಾಗರಾಜ್ ಕುಡಿದಿದ್ದಾರೆ ಎಂದು ಬರೆದರು. ಆ ಕಡೆ ಚುನಾವಣೆ ನಡೆಯುತ್ತಿದೆ ಇಲ್ಲಿ ಅದನ್ನು ಪತ್ರಿಕೆಗಳಲ್ಲಿ ಮುದ್ರಣ ಮಾಡಿ ಹಂಚುತ್ತಾ ಇದ್ದರೆ, ಮತದಾರರಲ್ಲಿ ನನ್ನ ಬಗ್ಗೆ ಯಾವ ರೀತಿಯ ಪರಿಣಾಮ ಬೀರಬಹುದು. ಮತ್ತೊಂದು ಕಡೆ ವಾಟಾಳ್ ನಾಗರಾಜ್ ಯಾರೋ ಒಬ್ಬ ಹೆಂಗಸಿನ ಜೊತೆಯಲ್ಲಿ ಇದ್ದ ಎಂದು ಇಂಥ ಕತೆಗಳು, ಎಷ್ಟು ನನ್ನನ್ನು ತೆಗಳಿ ತೇಜೋವಧೆ ಮಾಡತಕ್ಕ ಬರವಣಿಗೆಗಳು ಏನಿವೆ, ನಾನು ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದೇನೆ. ಅಂಥ ಬರವಣಿಗೆಗಳ ಬಗ್ಗೆ ಸ್ವಲ್ಪ ನಾವು ನಮ್ಮ ಕಡಿವಾಣವನ್ನು ಹಾಕಬೇಕು. ಸಮಾಜದಲ್ಲಿ ಇದರ ಬಗ್ಗೆ ಚಿಂತನೆ ಮಾಡಲಿಲ್ಲ ಎಂದರೆ ನಾಳೆ ನಾವು ಎಲ್ಲಿ ಹೋಗಿ ತಲಪುತ್ತೇವೋ ಗೊತ್ತಿಲ್ಲ. ಅವರು ಯಾರ ಮೇಲೆ ಬೇಕಾದರೂ ಬರೆಯಬಹುದು. ಇದೇ ರೀತಿ ಹೆಂಗಸರ ಮೇಲೂ ಬರೆದರೆ ಅವರ ಚಾರಿತ್ರ್ಯದ ಬಗ್ಗೆ ಬರೆದರೆ ಅವರ ಜೀವನವನ್ನೇ ಹಾಳುಮಾಡಬಹುದು ಇಂತಹ ಬರವಣಿಗೆಗಳು. ಕೆಲವು ಇತ್ತೀಚೆಗೆ ಬಂದಿರತಕ್ಕ ಪತ್ರಿಕೆಗಳು ಮಾಡುತ್ತಿರತಕ್ಕ ಕೆಲಸ ಇದರಿಂದ ಮನಸ್ಸಿಗೆ ನೋವಾಗುತ್ತದೆ. ಅವರ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಿತ್ತುಕೊಳ್ಳಿ ಎಂದು ಹೇಳುತ್ತಿಲ್ಲಿ. ಕೆಲವು ಇತ್ತೀಚೆಗೆ ಏನು ಪ್ರಸಂಗಗಳು ನಡೆಯುತ್ತಿವೆ. ಆದುದರಿಂದ, ನಾನು ಅತ್ಯಂತ ಕಳಕಳಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಏಶಿಯನ್ ಏಜ್ ಪತ್ರಿಕೆಯ ಮೇಲೆ ನಡೆದಿರುವುದರ ಬಗ್ಗೆ ಸರ್ಕಾರ ಸಂಪೂರ್ಣ ವಿಫಲ ಆಗಿದೆ. ಸರ್ಕಾರದ ಇದರ ಬಗ್ಗೆ ಒಂದು ತಿಂಗಳಿಂದ ಬರೀ ಚರ್ಚೆ ಮಾಡುತ್ತಿದೆ ಅಷ್ಟೆ, ಅದರ ಬಗ್ಗೆ ಗಂಭೀರವಾಗಿದೆ. ಮೌನವಾಗಿದೆ. ಇದುವರೆವಿಗೂ ಯಾರನ್ನೂ ಪತ್ತೆ ಹಚ್ಚಿಲ್ಲ. ಯಾರನ್ನೂ ಹಿಡಿದಿಲ್ಲ. ಒಂದು ಮಾತು ಹೇಳುವುದಾದರೆ,

ಇದಕ್ಕಿಂತ ನಾಚಿಕೆಗೇಡಿನ ವಿಷಯ ಇದಕ್ಕಿಂತ ಶಕ್ತಿಹೀನವಾದ ವಿಚಾರ ಮತ್ತೊಂದು ಇಲ್ಲ ಎನ್ನತಕ್ಕ ಮಾತನ್ನು ಅತ್ಯಂತ ನೇರವಾಗಿ, ಸ್ಪಷ್ಟವಾಗಿ ಹೇಳುತ್ತೇನೆ.

MR. SPEAKER : Actually it is a calling attention matter. Since we could not bring it under any other rule. Just I will make the rule slightly flexible.

+ ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 6ನೇ ತಾರೀಖು ಈ ಘಟನೆ ಆದ ಮೇಲೆ 7ನೇ ತಾರೀಖು ನಾನು ಏಶಿಯನ್ ಏಜ್ ಕಛೇರಿಗೆ ಹೋಗಿದ್ದೆ. ಕಛೇರಿಯ ಪರಿಸ್ಥಿತಿಯಯನ್ನು ನೋಡಿದ ಮೇಲೆ, ನಾನು ಯಾರು ಶ್ರೀಕಾಂತ್ ಅನ್ನುವವರು ಹೊಗೆಯ ಮಧ್ಯ ಸಿಲುಕಿ ಮಲ್ಯ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು, ಅವರ ಜೊತೆಯಲ್ಲೂ ಮಾತನಾಡಿದ ಮೇಲೆ ನನಗೆ ಬೆಂಗಳೂರಿನಲ್ಲಿ ಇದುವರೆವಿಗೂ ನಡೆಯದಂತಹ ಒಂದು it has senta wrong signal to some vested interests ಎಂದು ನಾನು ವಾದಿಸುತ್ತೇನೆ. ಈ ಒಂದು ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳಬಯಸುತ್ತೇನೆ. ಘಟನೆ ಆಗಿದ್ದು ಭಾನುವಾರ ಸಂಜೆ ಲಾವಿಲೇ ರೋಡಿನಲ್ಲಿ ಆ ಘಟನೆ ಆದ ಮೇಲೆ ಅಂಥ ಒಂದು ಭೀಕರ ಸಂದರ್ಭದ ವಾತಾವರಣದಲ್ಲಿ ಶ್ರೀಕಾಂತ್‌ರವರು ಒಂದೆರಡು ಪೋಲೀಸ್ ಅಧಿಕಾರಿಗಳಿಗೆ ಫೋನ್ ಮಾಡಿದಾಗ ಅವರು ಸಿಕ್ಕದೆ, ಈ ಸಂದರ್ಭದಲ್ಲಿ ನಾನು ಈ ಮಾತನ್ನು ಸಂತೋಷದಿಂದ ಹೇಳುತ್ತಿದ್ದೇನೆ. ನಮ್ಮ ರಾಜ್ಯದ ಡಿಸಿಪಿಯವರು ಆ ವೇಳೆಯಲ್ಲಿ ಮನೆಯಲ್ಲಿ ಇದ್ದು ತಾವು ಫೋನ್ ಬಂದ ತಕ್ಷಣ ಕಾರ್ಯೋನ್ಮುಖರಾದರು ಅವರು ಈ ಒಂದು ಕಾರ್ಯಕ್ಷಮತೆಯಿಂದ ಶ್ರೀಕಾಂತ್‌ರವರು ಮತ್ತೆ ವಾಪಸ್ಸು ಬಂದು ಪತ್ರಕಾರಂಗದಲ್ಲಿ ಕೆಲಸ ಮಾಡುವಂತಹ ರೀತಿಯಲ್ಲಿ ಅವರು ಶ್ರೀಕಾಂತ್‌ರವರಿಗೆ ಸಹಾಯ ಮಾಡಿದರು. ಪ್ರಾಯಶಃ ಭಾನುವಾರ ಸಂಜೆ ಸಾಮಾನ್ಯ ಯಾವ ಪೋಲೀಸ್ ಅಧಿಕಾರಿಗಳು ಮನೆಯಲ್ಲಿ ಇರುವುದಿಲ್ಲ. ಇದ್ದರೂ ಕೂಡ ಇವತ್ತು ಒಂದು ದಿವಸ ಆದರೂ ರಜೆ ಇರಲಿ ಎಂದು ಇರುತ್ತಾರೆ. ಆದರೆ ನಮ್ಮ ಡಿಜಿಪಿಯವರು ಒಬ್ಬ ನಮ್ಮಗಳೆಯನಿಗೆ ಸಹಾಯ ಮಾಡಿದಂತಹ ಸಂದರ್ಭವನ್ನು ಇಲ್ಲಿ ಸ್ಮರಿಸುತ್ತಾ ಸನ್ಮಾನ್ಯ ಅಧ್ಯಕ್ಷರೆ, ಒಂದು, dangerous trend ಅಸಹನೆ ತುಂಬಾ height of intolerance ಅದು ಸತ್ಯನಾರಾಯಣ್ ಕೊಲೆ ಇರಬಹುದು, ಏಶಿಯನ್ ಏಜ್ ಪತ್ರಿಕೆಯ ಮೇಲೆ ಅಟ್ಯಾಕೇ ಇರಬಹುದು. ಈಗ ವಾತವರಣ ಏನು ಬರುತ್ತಿದೆ ಅದಕ್ಕೆ ಪ್ರೋತ್ಸಾಹ ಕೊಡುವ ಹಾಗೆ ಸರ್ಕಾರ ಇರಬಾರದು. ನಮ್ಮ ಗೃಹ ಮಂತ್ರಿಗಳು ಒಂದು ಸಲ ಮಾತನಾಡುವಾಗ ಹೇಳಿದರು. It is a professional jealousy. Asian Age is the youngest newspaper in Bangalore City. ಇದರ ಬಗ್ಗೆ ಪ್ರೊಫಿಶನಲ್ ಜೆಲಸಿ ಇದ್ದರೆ ಹೋಗಿ ಪೆಟ್ರೋಲ್ ಹಾಕಿ ಸುಟ್ಟು ಪತ್ರಕರ್ತರ ಮೇಲೆ ಈ ರೀತಿ ಹಲ್ಲೆ ಮಾಡಿದ್ದು ಅದು ಸಾಮಾನ್ಯವಾಗಿ ಒಬ್ಬ ಕಾಮನ್‌ಸೆನ್ಸ್ ಇರುವ ವ್ಯಕ್ತಿಗೆ ಅರ್ಥವಾಗದೇ ಇರುವ ವಿಷಯ? ಇದನ್ನು ಒಂದು ಪ್ರೊಫಿಶಿನಲ್ ಜೆಲಸಿ ಎಂದು ಕನ್‌ವರ್ಟ್ ಮಾಡಲಿಕ್ಕೆ ಹೋಗುತ್ತಾರೆ ನಮ್ಮ ಸರ್ಕಾರದಲ್ಲಿ ಆಡಳಿತದಲ್ಲಿ ಮತ್ತು ಅಧಿಕಾರ ರಂಗದಲ್ಲಿ ಇರತಕ್ಕ ವ್ಯಕ್ತಿಗಳು. ಈಗ ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ಪೋಲೀಸ್ ಅಧಿಕಾರಿಗಳಿಗೆ ಸುಳಿವು ಸಿಕ್ಕಿದೆ. ವ್ಯಕ್ತಿಗಳು ಯಾರು ಎಂದು ಗೊತ್ತಿದೆ. ಒಬ್ಬ ಸಮೀರ್ ಅಂತ ವ್ಯಕ್ತಿ ಹೆಸರು ಕೂಡ ಗೊತ್ತಿದೆ ಬೆಂಗಳೂರಿನ ಒಬ್ಬ ಬಲಾಢ್ಯ ರಿಯಲ್ ಎಸ್ಟೇಟ್

ವ್ಯವಹಾರದಲ್ಲಿ ತೊಡಗಿರುವಂತವನ ಆಶ್ರಯದಲ್ಲಿ ಇವರೆಲ್ಲಾ ಇದ್ದಾರೆಂದು ಗೊತ್ತಿದೆ. ಆದರೂ ಕೂಡ ಒಂದು ರಾಜಕೀಯದ ಒತ್ತಡಕ್ಕೆ ಸಿಲುಕಿ ಒಂದು ಪತ್ರಿಕಾಲಯಕ್ಕೆ ಅಟ್ಯಾಕ್ ಆದರೂ ಹುಡುಕದೆ, ಒಂದು ತಿಂಗಳಿಂದ ನಿಷ್ಕ್ರಿಯರಾಗಿದ್ದೀರಿ. ಒಬ್ಬ ಯಾವನೋ ಕೈಗಾರಿಕೋದ್ಯಮಿ ಜಯಪುರಿಯನ್ನು ನೀವು ಹುಡುಕಿಕೊಂಡು ಹೋಗಿ ಕರೆದುಕೊಂಡು ಬರುತ್ತೀರಿ. ಹೈದರಾಬಾದ್‌ಗೆ ಸೆಲ್ಯೂಲಾರ್ ಫೋನ್ ಕಳುಹಿಸಿ ಹಿಡಿದು ಕರೆದುಕೊಂಡು ಬಂದು ಎಲ್ಲಾ ಸಾಹಸ ತೋರಿಸುತ್ತೀರಿ. ಬೆಂಗಳೂರಿನಲ್ಲಿ ಪತ್ರಿಕೆ ಕಾರ್ಯಾಲಯಕ್ಕೆ ಅಟ್ಯಾಕ್ ಆಗಿರುವುದಕ್ಕೆ ನೀವು ಕ್ರಮ ಕೈಗೊಳ್ಳಲಿಲ್ಲ ಎಂದರೆ it shows that there is a motive behind it. ಅದುದರಿಂದ ಒಂದು ಸಮಾಜಕ್ಕೆ ಇದರಿಂದ ಕೆಟ್ಟ ಸಂಕೇತ ಹೋಗಬಾರದು. ಪತ್ರಿಕೆ ಕಾರ್ಯಾಲಯಕ್ಕೆ ನುಗ್ಗುವುದು, ಬೆಂಕಿ ಇಡುವುದು ಬಹಳ ಸುಲಭವಾಗಿಬಿಟ್ಟಿದೆ ಅವರ ಬಾಯನ್ನು ಅದುಮುವುದರಲ್ಲಿ ಪ್ರಯತ್ನ ಪಟ್ಟರೆ ಯಶಸ್ವಿಯಾಗಬಹುದು ಎನ್ನೋ ಆ ಒಂದು ರಾಂಗ್ ಸಿಗ್ನಲ್ ಕಳುಹಿಸಬಾರದು ಎನ್ನುವ ಕಾರಣಕೋಸ್ಕರ, ಈಗ ನಮ್ಮ ನಾಯಕರು ಏನು ಹೇಳಿದ್ದಾರೆ. ಸಿಬಿಐಗೆ ರೆಫರ್ ಮಾಡಿ, ಸಿಬಿಐ ವಿಚಾರಣೆ ನಡೆಯಲಿ ಎಂದು ಮತ್ತೊಮ್ಮೆ ಇಂಥದ್ದು ನಮ್ಮ ಬೆಂಗಳೂರು ನಗರದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಆಗಬಾರದೆಂದು ಆಗ್ರಹಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಬಹಳ ಹೊತ್ತು ಮಾತನಾಡಲು ಹೋಗುವುದಿಲ್ಲ. ನಾವೂ ಕೂಡ ಅಧಿಕಾರದಲ್ಲಿ ಇದ್ದವರು. ಒಂದು ವರ್ಗದ ಜನರು ರೇಗಿ ಏಶಿಯನ್ ಏಜ್ ಪತ್ರಿಕಾ ಕಛೇರಿಯ ಮೇಲೆ ಧಾಳಿ ಮಾಡಿದರು ಎನ್ನತಕ್ಕ ವರ್ಷನ್ ಏನಿದೆ I think it is totally misdirected. ಏಕೆಂದರೆ ಯಾವುದೇ ಒಂದು ಸಮೂಹ ದಾಳಿ ಮಾಡುವುದಕ್ಕೂ ಇಲ್ಲಿ ನಡೆದಿರುವಂಥ ಘಟನೆಗಳೂ ಬಹಳ ವ್ಯತ್ಯಾಸವಿದೆ. ಏಕೆಂದರೆ ಯಾವುದೇ ಕ್ರೈಮ್ ಆಗಬೇಕಾದರೆ ಮೂಲಭೂತವಾಗಿ ಅರಿತುಕೊಳ್ಳಬೇಕಾಗುತ್ತದೆ. ಅಪರಾಧಿಗಳ ಸುಳಿವು ಸಿಕ್ಕಿದೆಯೆಂದು ಡಿ.ಜಿ.ಪಿ ಯವರು ಹೇಳಿದ್ದರು. ಡಿ.ಜಿ.ಪಿಯವರ ಕಾರ್ಯಕ್ಷಮತೆಯಿಂದ, ದಕ್ಷತೆಯಿಂದ ಆವತ್ತು ಕೆಲವರ ಪ್ರಾಣ ಉಳಿದಿದೆ, ಅದನ್ನು ಒಪ್ಪಬೇಕಾಗುತ್ತದೆ. ಕಬ್ಬನ್ ಪಾರ್ಕ್ ಪೋಲೀಸ್ ಠಾಣೆಯಿಂದ ಏಶಿಯನ್ ಏಜ್ ಪತ್ರಿಕಾ ಕಛೇರಿಗೆ ಹೋಗಲು ಐದು ನಿಮಿಷ ಸಹ ಬೇಕಾಗುವುದಿಲ್ಲ ಆ ಸ್ಥಳೀಯ ಪೋಲೀಸರು ಎಷ್ಟರಮಟ್ಟಿಗೆ ಎಚ್ಚರಿಕೆ ವಹಿಸಿದ್ದಾರೆ ಎನ್ನತಕ್ಕದ್ದು ಒಂದು ವಿಚಾರ. ಎರಡನೆಯದಾಗಿ ಯಾವ ಎಂದು ವರದಿ ಪತ್ರಿಕೆಯಲ್ಲಿ ಬಂದಿದೆ ಅದರ ಮೇಲೆ ತನಿಖೆಯನ್ನೇನು ನಡೆಸುತ್ತಿದ್ದೀರಿ ಅದು ಏಶಿಯನ್ ಏಜ್ ಪತ್ರಿಕೆಯೊಂದರಲ್ಲಿ ಬಂದಿಲ್ಲ, ಅದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಉರ್ದು ಪತ್ರಿಕೆಯಲ್ಲೂ ಬಂದಿದೆ. ಅದು ಪ್ರಪಂಚದಾದ್ಯಂತ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಈ ಒಂದು ಕಾರಣ ಕೇವಲ ಮುಖವಾಡ ಮಾತ್ರ. ಆದರೆ ಎಲ್ಲೂ ಈ ರೀತಿ ಒಂದು ವರ್ಗದವರು ಪತ್ರಿಕೆಯ ಕಛೇರಿಯ ಮೇಲೆ ದಾಳಿ ಮಾಡತಕ್ಕದ್ದು ನಡೆದಿಲ್ಲ. The whole approach for the investigation has been misdirected. ಬಹುಶಃ ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಆ ವರದಿ ಒಂದು ಮುಖವಾಡ, ಅದನ್ನು ಇಟ್ಟುಕೊಂಡು ಅವರು ಆ ಪತ್ರಿಕಾ ಕಛೇರಿಯ ಮೇಲೆ ಧಾಳಿ ಮಾಡಿದ್ದಾರೆಂದು ನನಗನ್ನಿಸುತ್ತದೆ. ಪತ್ರಿಕಾ ವರದಿಗಾರರು ಮುಖ್ಯಮಂತ್ರಿಯವರಿಗೆ

ಮನವಿಯನ್ನು ಸಲ್ಲಿಸಿದಾಗ ಈ ಧಾಳಿಯ ಹಿನ್ನೆಲೆಯಲ್ಲಿ ಕಾಣದ ಕೈಗಳು ಇದೆಯೆಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಹಾಗಿದ್ದರೆ ಆ ಕಾಣದ ಕೈ ಯಾವುದು? ಒಟ್ಟಿನಲ್ಲಿ ಈ ದಾಳಿಗೆ ಬೇರೆ ಮೋಟೀವ್ ಇದೆ. ಪ್ರವೋಕೇಷನ್ ಇದೆ, ಹಿನ್ನೆಲೆ ಇದೆ. ಇದನ್ನು ಹುಡುಕಲು ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ಏಕೆಂದರೆ ತಾವು ವರದಿಯಲ್ಲಿ ಅನೇಕ ವಿಷಯಗಳನ್ನು ಹೇಳದಿರಬಹುದು. ಆದರೆ ಈಗ ಹೋಗುತ್ತಿರುವ ತನಿಖೆಯ ಜಾಡನ್ನು ನೋಡಿದರೆ you will place yourself in a wrong place. ಖಂಡಿತವಾಗಿ ಇದರಿಂದ ಸರಿಯಾದ ತನಿಖೆಯಾಗುತ್ತಿಲ್ಲ. ಇದರಲ್ಲಿ professional jeolousy ಎನ್ನತಕ್ಕದ್ದು totally ruled out. ಇದನ್ನು ಸಮೂಹ ಸನ್ನಿಯಲ್ಲಿ ಮಾಡಿದ್ದರೆ ಅದೂ ಸಹ that is also totally ruled out. ನನಗೂ ಅಲ್ಲಿ ಒಂದು ಏಶಿಯನ್ ಏಜ್ ಪತ್ರಿಕಾ ಕಛೇರಿಯಿದೆಯೆಂದು ಗೊತ್ತಿರಲಿಲ್ಲ. ಈ ರೀತಿ ದಾಳಿಯಾದಮೇಲೆ ನನಗೆ ಗೊತ್ತಾಯಿತು. ಆದ್ದರಿಂದ, ಈ ವಿಚಾರದಲ್ಲಿ ತಾವು ಬಹಳ ವಿಶೇಷವಾಗಿ ತನಿಖೆ ಮಾಡಬೇಕಾಗುತ್ತದೆ. ಅದರ ಬಗ್ಗೆ ನಮ್ಮ ನಾಯಕರು ಹೇಳಿದ್ದಾರೆ. ಇಲ್ಲದಿದ್ದರೆ ತಾವು ಸರಿಯಾದಂಥ ತನಿಖೆ ಮಾಡುತ್ತಿಲ್ಲವೆನ್ನತಕ್ಕ ಆಪಾದನೆಗೆ ಒಳಗಾಗುತ್ತೀರಿ. ಏಕೆಂದರೆ ಇದು ಪತ್ರಿಕಾ ಸ್ವಾತಂತ್ರ್ಯದ ವಿಚಾರ. ಸಮೂಹ ಸನ್ನಿಯಲ್ಲಿ ದಾಳಿ ಮಾಡಬೇಕಾದರೆ ಅವರುಗಳು ಕದ್ದು, ಮುಚ್ಚಿ ಬರುವುದಿಲ್ಲ. They are all fully armed. ಹೋಗಿ ಗಲಾಟೆ ಮಾಡಿದ್ದಾರೆ. ತಳವಾರವನ್ನು ತೆಗೆದುಗಕೊಂಡು ಹೋಗಿ ಅಲ್ಲಿ ಎಲ್ಲರಿಗೂ ಬೀಸಿ ಗಾಯಗೊಳಿಸಿಬಿಟ್ಟಿದ್ದಾರೆ. ಆದರೆ ತಾವು ಈಗ ಹೋಗುತ್ತಿರುವ ತನಿಖಾ ಜಾಡಿನಿಂದ ಯಾರನ್ನೂ ಸಹ ಖಂಡಿತವಾಗಿ ಹಿಡಿಯಲು ಸಾಧ್ಯವಾಗುವುದಿಲ್ಲ. ಆ ಪತ್ರಿಕೆಯ ವರದಿಗಾರರು ಮುಖ್ಯಮಂತ್ರಿಯವರಿಗೆ ಮನವಿಯನ್ನು ಕೊಡುವಾಗ ಸಹ ರಾಜಕೀಯ, ಸಾರ್ವಜನಿಕ ಕ್ಷೇತ್ರಗಳ ಪಟ್ಟಭದ್ರಹಿತಾಸಕ್ತಿಗಳಿಂದ ಭೂಗತ ದೊರೆಗಳಿಂದ ಹಲ್ಲೆಗೆ ಇತ್ತೀಚೆಗೆ ಒಳಗಾಗುತ್ತಿದ್ದಾರೆ ಎನ್ನತಕ್ಕ ಗಂಭೀರವಾದ ಆಪಾದನೆಯನ್ನು ಮಾಡಿದ್ದಾರೆ. ಅದು ಬಹಳ ಮುಖ್ಯವಾದುದು. ಇದರ ಬಗ್ಗೆ ತಾವೇನು ಮಾಡಿದ್ದೀರಿ ಎಂಬುದು ಬಹಳ ಮುಖ್ಯವಾದುದು. ಎಷ್ಟು ಜನರನ್ನು ತಾವು ಇಂಟರಾಗೇಟ್ ಮಾಡಿದ್ದೀರಿ? ಏಕೆಂದರೆ ಅವರೇ ಸುಳಿವು ಕೊಟ್ಟಿದ್ದಾರೆ, ಆ ರೀತಿ ಕೊಟ್ಟಮೇಲೆ ಅದರ ಬಗ್ಗೆ ಸರಿಯಾಗಿ ತನಿಖೆಯಾಗಬೇಕಾಗುತ್ತದೆ. ಆದರೆ ಇವತ್ತು ಸರಿಯಾದ ಸುಳಿವನ್ನು ಕೊಟ್ಟರೆ ಸರಿಯಾದ ತನಿಖೆಯಾಗುವುದಿಲ್ಲವೆಂದು ಏಷಿಯನ್ ಏಜ್ ಸಿಬ್ಬಂದಿಗೆ ಬರುವುದಿದ್ದರೆ ಎಲ್ಲಿ ಸರಿಯಾದ, ನಿಷ್ಪಕ್ಷಪಾತವಾದ ತನಿಖೆಯಾಗುತ್ತದೆ? ಆ ರೀತಿ ಭಯ ಅವರುಗಳಿಗೆ ಇದೆ. ನಮ್ಮ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಈ ಪ್ರಕರಣವನ್ನು ಸಿ.ಬಿ.ಐಗೆ ವಹಿಸಿ ಎಂಬ ಬೇಡಿಕೆಯನ್ನು ಮಂಡಿಸಿದ್ದಾರೆ. ತಾವು ಇದರ ಅಪವಾದದಿಂದ ತಪ್ಪಿಸಿಕೊಳ್ಳಬೋಕಾದರೆ ಆ ಕ್ರಮವನ್ನು ತೆಗೆದುಕೊಳ್ಳಿ. ಆದರೆ ತಾವು ಒಂದು ತಿಂಗಳಾದರೂ ಅದರ ಬಗ್ಗೆ ತನಿಖೆ ಮಾಡಲು ಆಗಿಲ್ಲ. ತನಿಖೆ ಮಾಡುವುದಿದ್ದರೆ ಇಷ್ಟರಲ್ಲೇ ಮಾಡಬೇಕಾಗಿತ್ತು. ಹಾಡುಹಗಲಿನಲ್ಲಿ, ಬೆಂಗಳೂರು ನಗರದಲ್ಲಿ ಕೇವಲ ಐದು ನಿಮಿಷದಲ್ಲಿ ಹೋಗಬಹುದಾದ ಸ್ಥಳದಲ್ಲಿ ಪತ್ರಿಕಾ ಕಛೇರಿಯ ಮೇಲೆ ನೇರವಾಗಿ ದಾಳಿಯಾಗಬೇಕಾಗಿದ್ದರೆ ಅದನ್ನು ಹುಡುಕಲು ಅಷ್ಟು ಕಷ್ಟವೇನಿದೆ? ಡಿ.ಜಿ.ಪಿಯವರು ಸುಳಿವು ಸಿಕ್ಕಿದೆಯೆಂದು ದಾಳಿ ಆದ ದಿವಸವೇ ಹೇಳಬೇಕಾಗಿದ್ದರೆ ತಮಗೆ ಒಂದು ತಿಂಗಳಾದರೂ ಅವರನ್ನು ಹಿಡಿಯಲು ಏಕೆ ಆಗಲಿಲ್ಲ? ಇದು ಬಹಳ ಮುಖ್ಯ. ಇನ್ನು ಎರಡನೆಯದಾಗಿ ಪತ್ರಕರ್ತ

ಸತ್ಯನಾರಾಯಣ್‌ರವರ ಕೊಲೆಯ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ಬಹಳ ಲೀಡಿಂಗ್ ಪೇಪರ್‌ಗಳಲ್ಲಿ ಬಂದಿದೆ. ಇಲ್ಲಿ ಲೋಕಲ್ ಪೇಪರ್ಸ್, ಲೀಡಿಂಗ್ ಪೇಪರ್ ಎನ್ನತಕ್ಕದಲ್ಲ. ಬಹಳ ಲೀಡಿಂಗ್ ಪೇಪರ್‌ಗಳಲ್ಲಿ ಈ ಕೊಲೆಯಲ್ಲಿ ರಾಜಕೀಯ ಹಸ್ತವಿದೆಯೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಕೊನೆಯ ಪಕ್ಷ ಅಲ್ಲಿನ ಎಂ.ಎಲ್.ಎ ಯಾದರು ಸಹ ಆ ಅಪವಾದದಿಂದ ಮುಕ್ತರಾಗಬೇಕುಗಾತ್ತದೆ. Journalist exposed the Dal M.L.A.,... found killed ಎಂದು ಬಹಳ ಲೀಡಿಂಗ್ ಪೇಪರ್‌ಗಳಲ್ಲೆಲ್ಲ ಹೇಳಿದ್ದಾರೆ. ನಾನು ಎಂ.ಎಲ್.ಎ ಮೇಲೆ ಆಪಾದನೆ ಮಾಡುವುದಿಲ್ಲ, ಅವರು ನಿರಪರಾಧಿಗಳಿರಬಹುದು, ಅವರು ನಿರಪರಾಧಿಗಳಾಗಬೇಕಾದರು ಸಹ ಇದುವರೆಗೆ ಯಾರನ್ನೆಲ್ಲಾ ಇಂಟರಾಗೇಟ್ ಮಾಡಿದ್ದೀರಿ? ಯಾರ್‍ಯಾರ ಬಗ್ಗೆ ಹೇಳಿದ್ದಾರೆ, ಅವರನ್ನೆಲ್ಲ ತಾವು ಪ್ರಶ್ನೆ ಮಾಡಬೇಕಾಗುತ್ತದೆ. ಜನರ ಮನಸ್ಸಿನಲ್ಲಿ ಸರಿಯಾದ ತನಿಖೆ ಆಗಲಿಲ್ಲವೆನ್ನತಕ್ಕ ಶಂಕೆ ಇದೆ. ರಾಜಕಾರಣಿಗಳ ಮೇಲೆ ಈ ರೀತಿ ಆಪಾದನೆಗಳು ಬರುವಾಗ ಅದನ್ನು ನಿವಾರಿಸತಕ್ಕ ದಾರಿಯನ್ನು ತಾವು ನೋಡಬೇಕಾಗುತ್ತದೆ. ತಾವು ನೀಡಿದ ವರದಿಯ ಬಗ್ಗೆ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಸರ್ಕಾರ ಈ ರೀತಿಯಾದ ವರದಿಯನ್ನು ಕೊಡಬಾರದು. ಆ ವರದಿಯಲ್ಲಿ ಸತ್ಯನಾರಾಯಣ ಅಲ್ಲ ಸಲ್ಲದ ವರದಿಯನ್ನು ಬರೆಯುತ್ತಿದ್ದ ಎಂದು ನೀವೇ ಪ್ರವೋಕ್ ಮಾಡಿ ಹೇಳಿದ್ದೀರಿ. ಅದನ್ನು ತಾವು ಏಕೆ ಹೇಳಬೇಕು? ಅಲ್ಲ ಸಲ್ಲದ ಎಂದು, when you have come to a conclusion that ಅವರು ಹಾಕಿದಂಥ ಅಲ್ಲ ಸಲ್ಲದ ವರದಿಯೆಂದು ತಾವೇ ಆ ಸತ್ತು ಮಣ್ಣಾಗಿರುವ ಸತ್ಯನಾರಾಯಣನ ಮೇಲೆ ಸರ್ಕಾರದ ವರದಿಯಲ್ಲೇ ಆಪಾದನೆ ಮಾಡುವಾಗ. ತಾವೇ ಸಮಾಲೋಚನೆ ಮಾಡಿಕೊಳ್ಳಿ. ಹಾಗಾದರೆ ಅಲ್ಲ ಸಲ್ಲದ ಆಪಾದನೆಯ ವರದಿಯನ್ನು ಯಾರು ಮಾಡಿದ್ದಾರೆ ಅವರೇ ಕೊಲೆ ಮಾಡಿರಬಹುದೆಂದು ಬರುತ್ತದೆ. I am telling you that indirectly you are again attributing that ಈ ಪತ್ರಿಕೆಯಲ್ಲೇನು ವರದಿ ಬಂದಿದೆ ಆ ಆಪಾದನೆಯನ್ನು ತಾವೇ ಸ್ಥಿರ ಮಾಡಿದಂತಾಗುತ್ತದೆ. I am just telling you ಇಲ್ಲದಿದ್ದರೆ ಅಲ್ಲ ಸಲ್ಲದ ಆಪಾದನೆ ಮಾಡಿದ ಎಷ್ಟು ಜನರನ್ನು ತಾವು ಇಂಟರಾಗೇಟ್ ಮಾಡಿದ್ದೀರಿ? The motive for murder is that. ತಾವು ಸರ್ಕಾರದ ವರದಿಯ ಪ್ರಕಾರವೇ what is the motive ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ಸರ್ಕಾರದ ವರದಿಯಲ್ಲೇ ಸತ್ಯನಾರಾಯಣ್‌ರವರು ಅಲ್ಲ ಸಲ್ಲದ ಆಪಾದನೆ ಮಾಡಿದ್ದಾರೆ. ಆದ್ದರಿಂದ ಅವರ ಕೊಲೆಯಾಗಿರಬಹುದೆಂದು ಹೇಳಿದ್ದೀರಿ. That is the inference which you have drawn. ತಾವೇ ಸ್ಪಷ್ಟವಾಗಿ ಒಪ್ಪಿಕೊಂಡಂತಾಗಿದೆ. ಸರ್ಕಾರ ಒಪ್ಪಿಕೊಂಡಮೇಲೆ ಆ ಧಾಟಿಯಲ್ಲಿ ತಾವು ಕೆಲಸ ಮಾಡಿಲ್ಲ. ಇದರ ಬಗ್ಗೆ ಸರಿಯಾದಂಥ ತನಿಖೆಯಾದಂತೆ ಕಾಣುವುದಿಲ್ಲ, ಬಹುಶಃ ನಮಗೆ ಸರಿಯಾಗಿಯೇ ಪತ್ರಿಕೆಗಳವರು ಬರೆಯಬೇಕು ಎಂದು ಪತ್ರಿಕಾ ಕ್ಷೇತ್ರವನ್ನು ಬಂಧನ ಮಾಡತಕ್ಕ ಪ್ರವೃತ್ತಿಯನ್ನು ನಿಲ್ಲಿಸಬೇಕಾದರೆ ಹೇಳಿಕೆಗಳಿಂದ, ಘೋಷಣೆಗಳಿಂದ ಆಗುವುದಿಲ್ಲ. ಇದರಲ್ಲಿ ನಿಜವಾದಂಥ ಆ್ಯಕ್ಷನ್ ಪ್ರೋಗ್ರಾಮ್ ತಮ್ಮಿಂದ ಆಗಲೇಬೇಕಾಗುತ್ತದೆ. ಯಾರು ಆಪಾದಿತರಿದ್ದಾರೆ ಅವರನ್ನು ಸರಿಯಾಗಿ ಪ್ರಶ್ನಿಸಿ ನ್ಯಾಯಾಲಯದ ಕಟಕಟೆಗೆ ತರತಕ್ಕ ಪ್ರಮಾಣಿಕ ಪ್ರಯತ್ನ ಸರ್ಕಾರ ಮಾಡದಿದ್ದರೆ, ಇದರ ಬಗ್ಗೆ ಸರಿಂಸಾಗಿ ತನಿಖೆಯಾಗಿಲ್ಲ, ಸರಿಯಾದ ತನಿಖೆ ಮಾಡುವ ಪ್ರಾಮಾಣಿಕ ಪ್ರಯತ್ನವನ್ನು

ತಾವು ಮಾಡುತ್ತಿಲ್ಲ ಎನ್ನತಕ್ಕ ಆಪಾದನೆ ಸರ್ಕಾರದ ಮೇಲೆ ಉಳಿಯುತ್ತದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಅಧ್ಯಕ್ಷರೆ, ನನಗೆ ತಾವು ಇದರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಮೊಟ್ಟಮೊದಲು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದು ಬಹಳ ಸೂಕ್ಷ್ಮವಾದ ವಿಷಯವಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರು, ನಮ್ಮ ನಾಯಕರು ಹೇಳಿದಂತೆ ಇದನ್ನು ಸಿ.ಬಿ.ಐ ತನಿಖೆಗೆ ರೆಫರ್ ಮಾಡಬೇಕು. ಮುಖ್ಯಮಂತ್ರಿಗಳು ಸಹ ಇದ್ದಾರೆ, ಏತಕ್ಕಾಗಿ ಇದನ್ನು ಸಿ.ಬಿ.ಐಗೆ ವಹಿಸಬೇಕು ಎಂಬುದಕ್ಕೆ ಕೆಲವು ಕಾರಣಗಳನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್ ಅಲ್ಲಿರುವರ ದೊಡ್ಡ ಆಸ್ತಿ. ಅದನ್ನು ಒಡೆದುಹಾಕಿ ಅದರ ಹರಾಜಾಯಿತು, ಆ ರೀತಿ ಹರಾಜಾದಾಗ ಎರಡು ಕೋಟಿ ರೂಪಾಯಿ ಬೆಲೆ ಬಾಳತಕ್ಕ ಆಸ್ತಿಯನ್ನು ಬೇನಾಮಿ ಟ್ರಾನ್ಸ್ಯಾಕ್ಷನ್ ಮಾಡಿ ನಹೀಮ್ ಎನ್ನತಕ್ಕವನ ಹೆಸರಿನಲ್ಲಿ ಬೇನಾಮಿ ನಿಲ್ಲಿಸಿಕೊಂಡರು. ಆ ರೀತಿ ಮಾಡಿಕೊಂಡಾಗ ಅಲ್ಲೆ ಇದ್ದಂಥ ಒಬ್ಬ ಲೈಫ್ ಮೆಂಬರ್ ಇದು ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್‌ಗೆ ಅನ್ಯಾಯವಾಗಿದೆ, ಈ ರೀತಿ ಇದು ಆಗಬಾರದು, ಈ ಹರಾಜನ್ನು ರದ್ದು ಮಾಡಬೇಕು ಎಂದು ಕೋರ್ಟಿನ ಮೊರೆಹೋದರು. ಕೋರ್ಟಿನಲ್ಲಿ 8ನೇ ತಾರೀಖು ಕೇಸ್ ಇತ್ತು. ಯಾರು ಇದಕ್ಕೆ ಅಡ್ಡಿ ಮಾಡಿ ಕೇಸನ್ನು ಹಾಕಿದರೋ ಅವರು ಕೋರ್ಟಿಗೆ ಹೋಗಬಾರದೆಂದು ಅವರನ್ನು ಹೊಡೆದು ಅವರು ಇವತ್ತು ಆರ್.ಟಿ. ನಗರದ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

6.10 ಪಿ.ಎಂ.

ಇದು ಹೇಗಾಯಿತು ಎನ್ನುವ ಎಲ್ಲಾ ವಿಷಯಗಳು ಕೂಡ ಎರಡು ಪೇಪರ್‌ಗಳಲ್ಲಿ ಬಂತು. ಏಷಿಯನ್ ಏಜ್ ಎನ್ನುವ ಒಂದೇ ಪತ್ರಿಕೆಯಲ್ಲಿ ಅಲ್ಲ, ಸುಲ್ತಾನ್ ಎನ್ನುವಂತಹ ಉರ್ದು ಪತ್ರಿಕೆಯಲ್ಲಿ ಕೂಡ ಎಲ್ಲಾ ವಿಷಯಗಳು ಕೂಲಂಕಷವಾಗಿ ಇದರ ಬಗ್ಗೆ ಬಂತು. ಆದುದರಿಂದ, ಈಗ ಏನು ಉತ್ತರ ಕೊಟ್ಟಿದ್ದೀರಲ್ಲ, ಕೇವಲ ಪ್ರೊಫೆಶನಲ್ ಜೆಲಸಿ ಆಗಬೇಕಾಗಿದ್ದರೆ ಸುಲ್ತಾನ್ ಎನ್ನುವಂತಹ ಪತ್ರಿಕೆಯಲ್ಲಿ ಕೂಡ ಇವತ್ತು ಆಗಬೇಕಾಗಿತ್ತು. ಆದರೆ ಅದರ ಮೇಲೆ ಯಾರೂ ಕೂಡ ಹೋಗಿ ದಾಳಿ ಮಾಡಿಲ್ಲ. ಆದರೆ ಕೇವಲ ಏಶಿಯನ್ ಏಜ್‌ನಲ್ಲಿ ಬಂತು. ಇದು ಏನಾಗಿದೆಯೆಂದರೆ ಇದರಲ್ಲಿ ಪೋಲೀಸರು ಸರಿಯಾಗಿ ಇನ್‌ವೆಸ್ಟಿಗೇಷನ್ ಮಾಡಿದರು. ಸರಿಯಾದ ಅಪರಾಧಿಗಳು ಯಾರಿದ್ದರು ಅವರನ್ನು ಕೂಡ ಹಿಡಿದರು. ನನಗೆ ಬಹಳ ದುಃಖ ತರುವಂತಹ ಸಂಗತಿ ಏನೆಂದರೆ ಅವರು ಇಬ್ಬರು ಅಪರಾಧಿಗಳನ್ನು ಹಿಡಿದು ದಿನಾಂಕ 28.7.97ರಂದು ಅರೆಸ್ಟ್ ಮಾಡಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಇರತಕ್ಕಂಥ ನಮ್ಮ ಸ್ಟೇಟ್ ಮಂತ್ರಿಗಳಿಗೆ ಗಮನಕ್ಕೆ ತರುವುದು ಏನೆಂದರೆ ಅವರ ಪಿ.ಎ. ಫೋನ್ ಮಾಡಿ ಅವರನ್ನು ಇವತ್ತು ಬಿಡಿಸಿದ್ದಾರೆ. ರೋಷನ್ ಬೇಗ್‌ರವರ ಪಿ.ಎ. ಫೋನ್ ಮಾಡಿ ಹಿಡಿದಂತಹ ಅಪರಾಧಿಗಳನ್ನು ಬಿಡಿಸಿದ್ದಾರೆ.

ಅಧ್ಯಕ್ಷರು : ಪಿ.ಎ. ಯಾರು? ಅವರ ಹೆಸರು ಏನು?

ಶ್ರೀಮತಿ ಪ್ರಮೀಳಾ ನೇಸರ್ಗಿ : ಫೋನ್ ಮಾಡಿ ಅವರನ್ನು ಬಿಡಿಸುತ್ತಾರೆ.

ಅಧ್ಯಕ್ಷರು : ತಮಗೆ ಗೊತ್ತಿದೆ, ನೀವು ಚಾರ್ಜ್ ಮಾಡಬೇಕಾದರೆ ನನಗೆ ಮೊದಲು ಇನ್‌ಫಾರಂ ಮಾಡಬೇಕು. ನೀವು ಏಕಾಏಕಿ ಮಾಡಿಬಿಟ್ಟರೆ ಹೇಗೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಹೇಳುತ್ತೇನೆ, ಇವತ್ತು ಅವರನ್ನು ಬಿಡಿಸದೆ ಇದ್ದರೆ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಪ್ರಮೀಳಾ ನೇಸರ್ಗಿಯವರೇ, ನೀವು ಇದರ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ....

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಹೇಳುವುದಕ್ಕೆ ಬಿಡಿ.

ಶ್ರೀ ಎಂ.ಸಿ. ನಾಣಯ್ಯ : ನಾನು ತಾವು ಮಾತನಾಡುವುದನ್ನು ನಿಲ್ಲಿಸುವುದಿಲ್ಲ. ಅವರಿಗೆ ಮಾತನಾಡುವುದಕ್ಕೆ ಅಧಿಕಾರ ಇದೆ. You are making certain direct allegations. I am only worried about that.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೇ, It is not an allegation, it is a statement of fact. ನಾನು ಹೇಳುತ್ತೇನೆ, ನಾನು ಪೂರ್ತಿ ಹೇಳುವವರೆಗೆ ಕೇಳಿ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಅಧ್ಯಕ್ಷರೆ, if that is the case... please hear me now. We are working in the Assembly. ಈ ಸದನದಲ್ಲಿ ಆಪಾದನೆ ಮಾಡಬೇಕಾದರೆ ನೀವು ದಯವಿಟ್ಟು ಮಾನ್ಯ ಸಭಾಧ್ಯಕ್ಷರಿಗೆ ಪತ್ರ ಬರೆಯಿರಿ. ಈ ತರಹ ನಡೆದಿದೆ ಎಂದು ಹೇಳಿ. ಅವರು ಅದಕ್ಕೆ ಒಂದು ಅವಕಾಶ ಕೊಡಬೇಕಾಗುತ್ತದೆ. ನಾವು ಸರ್ಕಾರದ ವತಿಯಿಂದ ಉತ್ತರ ಹೇಳಬೇಕಾಗುತ್ತದೆ. She should become a witness before the Police under Section 162. If you have got any inside information, go and become a witness before the Police under Sec.162. You cannot do that it is not permissible. I am raising a point of order.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಬಂದಿರುವುದು. ಇಲ್ಲಿ ನಾವು ಏನು ಸತ್ಯ ಸಂಗತಿ ಹೇಳಬೇಕು ಅದನ್ನು ಹೇಳವುದಕ್ಕೆ ನಮಗೆ ಸ್ವಾತಂತ್ರ್ಯ ಇದೆ. ಅದನ್ನು ಅಡ್ಡಿ ಪಡಿಸುವುದಕ್ಕೆ ನೀವ್ಯಾರು? ಸತ್ಯ ಸಂಗತಿ ನೀವು ಹೇಳಲೇ ಬೇಡಿ. ನೀವೂ ಹಿಡಿಯುವುದಿಲ್ಲ. ಏನು ನಡೆದಿದೆ ಎನ್ನುವುದನ್ನು ಹೇಳುತ್ತಿದ್ದರೆ ಕೇಳುವುದಕ್ಕೆ ಸಿದ್ಧರಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಲೋಪ ಎತ್ತಿದ್ದೇನೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಒಂದು ಪ್ರಕರಣದ ಬಗ್ಗೆ ಮಾತನಾಡುವುದಕ್ಕೆ ಅಧಿಕಾರ ಇದೆ. ಮಾತನಾಡಲಿ. ಯಾವ ವಿಚಾರವನ್ನಾದರೂ ನೀವು ಮಾತನಾಡಿ. ಆದರೆ ತಾವು ಈ ಒಂದು ಪ್ರಕರಣದ ಬಗ್ಗೆ ಕೆಲವು ನೇರವಾಗಿರತಕ್ಕಂಥ ಆಪಾದನೆಗಳನ್ನು ಮಾಡಿದ್ದೀರಿ. ಈ ನೇರವಾಗಿರತಕ್ಕಂಥ ಆಪಾದನೆಗಳನ್ನು ಬಹುಶಃ ನಿಮಗೆ ಗೊತ್ತಿರತಕ್ಕಂಥ ಆಪಾದನೆಗಳು ಎಂದು ಹೇಳುವ ಮಟ್ಟದಲ್ಲಿ ನೀವು ಹೇಳಿದ್ದೀರಿ. ಎಂದರೆ ಅವರು ಯಾರೋ ಒಬ್ಬರನ್ನು ದಸ್ತಗಿರಿ ಮಾಡಿದರು. ದಸ್ತಗಿರಿ ಮಾಡಿದವರನ್ನು ಬಿಡುಗಡೆ ಮಾಡುವುದಕ್ಕೆ ಮಂತ್ರಿಗಳ ಪಿ.ಎ ಒಬ್ಬರು ನೇರವಾಗಿ ದೂರವಾಣಿ ಮುಖಾಂತರ ಮಾತನಾಡಿ ಅವರನ್ನು ಬಿಡುಗಡೆ ಮಾಡಿದ್ದಾರೆ ಎಂದು. ಈಗ ನಾನು ಹೇಳುತ್ತೇನೆ, ಸದನದಲ್ಲಿ ತಾವು ಈ ತರಹ ಮಾಡುತ್ತಿರತಕ್ಕಂಥ ಹೇಳಿಕೆಗೆ ಆಧಾರ ಇದ್ದರೆ, ಬಹುಶಃ ನೀವು ಈ ತರಹದ ಆಪಾದನೆಗಳನ್ನು ಮಾಡಬೇಕಾದರೆ ಅಥವಾ ಇದರಲ್ಲಿ ನಿಖರವಾದ ಮಾಹಿತಿ ಇದ್ದರೆ ತಾವು ದಯವಿಟ್ಟು ಸಭಾಧ್ಯಕ್ಷರಿಗೆ ಪತ್ರ ಬರೆಯಿರಿ. ಕಾರಣ ನಾನು ಹೇಳುತ್ತೇನೆ ಇದು ಒಬ್ಬ ಮಂತ್ರಿಯ, ಸಚಿವಾಲಯಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಯಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅನೇಕ ಸಂದರ್ಭಗಳಲ್ಲಿ ಮಂತ್ರಿಗಳಿಗೆ ಗೊತ್ತಿಲ್ಲದೆ ಅವರ ಪ್ರೈವೇಟ್ ಸೆಕ್ರೆಟರಿಗಳು ಏನೇನು ಆಗಿರುವ ಘಟನೆಗಳು ನಡೆದಿಲ್ಲವೇ? ಇದೇ ನಮ್ಮ ಗಣಿ ಸಚಿವರ ಬಗ್ಗೆ ಮಾತನಾಡಿದಾಗ ಅವರ ಆಫೀಸ್‌ನಿಂದ ನಡೆಯುತ್ತಿತ್ತು ಎಂದು ಇಲ್ಲಿ ಚರ್ಚೆ ಆಗಲಿಲ್ಲವಾ?

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಯಡಿಯೂರಪ್ಪನವರೇ ಇದರ ಬಗ್ಗೆ ಹೇಳಿ. ನಾವೆಲ್ಲರೂ ಇವತ್ತು ಶಾಸಕರಾಗಿದ್ದೇವೆ. ಕೆಲವು ವಿಚಾರದಲ್ಲಿ ನಿಮಗೆ ಅಧಿಕಾರ ಇದೆ. ಇರುವಂತಹ ಸಂದರ್ಭ ಉಂಟು. ನಮಗೂ ಅಧಿಕಾರ ಇದೆ. ನಮಗೂ ಆಪ್ತ ಸಹಾಯಕರು ಇದ್ದಾರೆ, ನಿಮಗೂ ಕೂಡ ಆಪ್ತ ಸಹಾಯಕರು ಇದ್ದಾರೆ. ನಾವು ಈ ಸದನದಲ್ಲಿ ಯಾವುದೋ ಒಬ್ಬ ಮಂತ್ರಿಗಳ ಪಿ.ಎಸ್‌ರವರು ನೇರವಾಗಿ ದೂರವಾಣಿ ಮುಖಾಂತರ ಮಾಡಿ ಅವರನ್ನು ಬಿಡುಗಡೆ ಮಾಡಿದರು ಎಂದರೆ.....

ಶ್ರೀ ಬಿ. ಎಸ್. ಯಡಿಯೂರಪ್ಪ : ಇನ್‌ವೆಸ್ಟಿಗೇಟ್ ಮಾಡಿ.

ಶ್ರೀ ಎಂ. ಸಿ. ನಾಣಯ್ಯ : ತಾವು ಈ ತರಹ ತಿಳಿಸಿ. ಈ ತರಹ ನಿಖರವಾದ ಮಾಹಿತಿಯನ್ನು ಕೊಡುತ್ತೇನೆಂದು ಮಾನ್ಯ ಅಧ್ಯಕ್ಷರಿಗೆ ತಿಳಿಸಿ. ತಿಳಿಸಿ ಆದಮೇಲೆ ಸರ್ಕಾರದ ಮುಖಾಂತರ ಉತ್ತರ ಕೊಡುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅರೆಸ್ಟ್ ಮಾಡಿಲ್ಲ ಎಂದು ಹೇಳುವುದಿರಿಂದ ನೀವು ಸೆಕ್ಯೂರಿಟಿ ಗಾರ್ಡ್ ಇಬ್ಬರೂ....

Sri. M.C. Nanaiah : Or else, you should become a prime witness now. Give a statement under Section 162 before the Police Commissioner. I think Sir, it should not be permitted to go on record. I am sorry.

ಅಧ್ಯಕ್ಷರು : ನೇಸರ್ಗಿಯವರೇ, ನಾನು ತಮಗೆ ಏನು ಹೇಳುತ್ತೇನೆ ಎಂದರೆ ಒಂದು ನಿಮ್ಮ ಮಾತನ್ನು ನಿಲ್ಲಿಸಬೇಕು, ನೀವು ಮಾತನಾಡಬಾರದು, ಆಪಾದನೆಗಳನ್ನು ಮಾಡಬಾರದು ಎಂದು ಹೇಳುವುದಿಲ್ಲ. ನನಗಿಂತ ಚೆನ್ನಾಗಿ ತಮಗೆ ಗೊತ್ತಿದೆ. ನಾವು ಕೆಲವು ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದೇವೆ. ತಾವು ಆಪಾದನೆ ಮಾಡಬೇಕಾದಂತಹ ಸನ್ನಿವೇಶದಲ್ಲಿ ನನಗೆ ಮುಸ್ಸೂಚನೆ ಕೊಟ್ಟು ಮಾಡಬೇಕಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಮಂತ್ರಿಗಳ ಮೇಲೆ ಆಪಾದನೆ ಮಾಡಿಲ್ಲ. ನಾನು ಮಂತ್ರಿಗಳ ಮೇಲೆ ಮಾಡಿದ್ದಿರೆ ಖಂಡಿತವಾಗಿಯೂ ನಾನು ಕೊಡುತ್ತಿದೆ. ಮಾನ್ಯ ಮಂತ್ರಿಗಳಿಗೆ ಈ ವಿಷಯ ಗೊತ್ತಿದೆ ಎಂದು ನಾನು ಹೇಳುತ್ತಾ ಇಲ್ಲ. ನಾನು ಹೇಳುತ್ತಿರುವುದು ಅವರ ಆಫೀಸ್‌ನಲ್ಲಿ ಏನಾಗಿದೆ ಎಂದು. ದಿನಾಂಕ 28.7.97ರ ಡೇಟ್ ಕೂಡ ಕೊಡುತ್ತಿದ್ದೇನೆ. ಯಾವಾಗ ಅರೆಸ್ಟ್ ಮಾಡಿದರು ಎಂದು ಹೇಳುತ್ತಿದ್ದೇನೆ. ದಿನಾಂಕ 29.7.97ರಂದು ಅವರು ಬಿಟ್ಟಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ಯಾವ ಮಂತ್ರಿ ಕಛೇರಿಯಿಂದ ಯಾವಾಗ ಯಾರಿಗೆ ಟೆಲಿಫೋನ್ ಮಾಡುತ್ತಾರೆ ಎನ್ನುವ ದಾಖಲೆ ಇದೆಯೇ ನಮ್ಮ ದೇಶದಲ್ಲಿ? ಈಗ ನನ್ನ ಆಫೀಸ್‌ನಿಂದಲೇ ನನ್ನ ರುಜು ಎಂದು ತಿಳಿದುಕೊಂಡು ಫೋರ್ಜರಿ ಮಾಡಿದರು. ಈಗ ಅವರನ್ನು ಅರೆಸ್ಟ್ ಮಾಡಿಸಿ ಜೈಲಿಗೂ ಹಾಕಿಸಿದ್ದೇನೆ. ಇಂತಹ ಸಂದರ್ಭದಲ್ಲಿ ಇಷ್ಟು ಗಹನವಾದ ವಿಷಯ ಇರುವಾಗ ಒಬ್ಬ ಗೃಹಸಚಿವರು ಆಫೀಸ್‌ನಿಂದ ಫೋನ್ ಮಾಡಿ ಬಿಡಿಸಿದರು ಎಂದು Honourable Minister of this House ಬಗ್ಗೆ ಹೇಳುತ್ತಿದ್ದೀರಿ. ಅದಕ್ಕೆ ಮಾನ್ಯ ಕಾನೂನು ಸಚಿವರು ಇದ್ದರೆ ವಾಸ್ತವಿಕತೆ ಇದ್ದರೆ ತಾವು ಹೀಗೆ ನನಗೆ ಬಂದಿದೆ ರುಜುವಾತು ಇದೆ ನನ್ನ ಹತ್ತಿರ ಇಷ್ಟು ಎವಿಡೆನ್ಸ್ ಇದೆ ಎಂದು ಬರೆಯಿರಿ. ಆಮೇಲೆ ತಾವು ಮಾತನಾಡಿ. ಸುಮ್ಮನೆ ಹಾಗೆ ಫೋನ್ ಮಾಡಿ, ಬಿಡಿಸಿಬಿಟ್ಟಿದ್ದಾರೆ ಎಂದರೆ ಹೇಗೆ? You are a senior most lawyer. ಹಾಗೆ ಹೇಳುವುದಕ್ಕೆ ಆಗುತ್ತದಾ? ಹೇಳಿ.

ಅಧ್ಯಕ್ಷರು : ಬಹುಶಃ ನಿಮ್ಮ ಅಭಿಪ್ರಾಯ ಇದು ಇರಬಹುದು. ಅವರ ಮಂತ್ರಿಗಳ ಪ್ರೈವೇಟ್ ಸೆಕ್ರೆಟರಿ ಎಂದು ಹೇಳಿ ಯಾರೋ ಫೋನ್ ಮಾಡಿದ್ದರೆ, ಆ ರೀತಿ ಇರಬಹುದು ಎಂದು ನಿಮ್ಮ ಅಭಿಪ್ರಾಯ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇಲ್ಲ, ಯಾವ ಸ್ಟೇಷನ್‌ಗೆ ಮಾಡಿದರು. ಎಲ್ಲಿ ಅರೆಸ್ಟ್ ಮಾಡಿದರು? ಎಲ್ಲಿ ಅವರನ್ನು ಇಟ್ಟಿದ್ದರು? ಪೋಲೀಸ್ ಅಧಿಕಾರಿಗಳಿಗೆ ನಾನು ಹೇಳಿದ್ದೇನೆ. The discussion is in a very crucial stage.

ಅಧ್ಯಕ್ಷರು : ಈ ಡಿಸ್‌ಕಷನ್ ಮಧ್ಯೆ ನಾನು ಇಂಟರ್‌ವೀನ್ ಆದರೆ ಡಿಸ್‌ಕಷನ್ scuttle ಮಾಡುವುದಕ್ಕೆ ಎಫರ್ಟ್ ಮಾಡುತ್ತಿದ್ದೇನೆ ಎನ್ನುವ ಅಭಿಪ್ರಾಯ ಪ್ರತ್ಯಕ್ಷವಾಗಿ ಆಗಲಿ, ಪರೋಕ್ಷವಾಗಿ ಆಗಲಿ ಯಾರಿಗೂ ಬರಬಾರದು. I am prepared to sit and hear further. ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ, ಪ್ರೈವೇಟ್ ಸೆಕ್ರೆಟರಿ is not a nobody in a Minister's office. He is practically everything in the Minister's office. ಪ್ರೈವೇಟ್ ಸೆಕ್ರೆಟರಿ ಅಂದಮೇಲೆ

I think he is Class-I officer. ಪಿ.ಎ ಎಂದರೆ ಅಸಿಸ್ಟೆಂಟ್ಸ್ ಇರುತ್ತಾರೆ. ಎಲ್ಲರೂ ಪಿ.ಎ ಎಂದು ಹೇಳಿಕೊಳ್ಳುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ತಾವು ಬೇಡ ಎಂದು ಹೇಳುತ್ತಿದ್ದೀರಾ?

ಅಧ್ಯಕ್ಷರು : ನಾನು ಈ ವಿಷಯದ ದೃಷ್ಟಿಯಿಂದ ಹೇಳುತ್ತಿಲ್ಲ. ಸದನದ ಕಲಾಪಗಳಲ್ಲಿ ಹೊಸ ಒಂದು ಸಂಪ್ರದಾಯವನ್ನು ಸೃಷ್ಟಿಸುವುದು ಬೇಡ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಏನು ಹೇಳುತ್ತೇನೆ ಎಂದರೆ ಪ್ರೈವೇಟ್ ಸೆಕ್ರೆಟರಿ is an official. He will not be in a position to defend himself. ಪ್ರೈವೇಟ್ ಸೆಕ್ರೆಟರಿ ಎಂದ ಮೇಲೆ ಮಂತ್ರಿಗಳು ಡಿಫೆಂಡ್ ಮಾಡಬೇಕು. ನಾನು ಏನು ಹೇಳುತ್ತೇನೆ ಎಂದರೆ ಒಂದು ವೇಳೆ ತಮಗೆ ಖಚಿತವಾದ ಮಾಹಿತಿ ಇದ್ದರೆ ನಿಮಗೆ ಸ್ವಾತಂತ್ರ್ಯ ಇದೆ. ಅದು ನಿಮ್ಮ ಹಕ್ಕು. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಸದನದಲ್ಲಿ ಶಾಸನಸಭಾ ಸದಸ್ಯರಾಗಿ ಇಲ್ಲಿ ಹೇಳದೆ ಹೊರಗೆ ಹೋಗಿ ಹೇಳುವುದಕ್ಕೆ ಆಗುವುದಿಲ್ಲ. ಇದು ಸೂಕ್ತವಾದ ಜಾಗ. ಇದು ವೇದಿಕೆ. ದಯಮಾಡಿ ಹೇಳಿದರೆ ನಾವು ತಾಳ್ಮೆಯಿಂದ ಕುಳಿತುಕೊಂಡು ಕೇಳುತ್ತೇವೆ. ಅದರ ಬಗ್ಗೆ ಎಲ್ಲಾ ಕ್ರಮ ತೆಗೆದುಕೊಳ್ಳಿ ಆದರೆ ನಾನು ಏನು ಹೇಳುತ್ತೇನೆಂದರೆ ಆಧಾರಗಳು ಇಲ್ಲದೆ, ಮಾಹಿತಿ ಇಲ್ಲದೆ ಗಂಭೀರವಾದಂತಹ ಆರೋಪ ಮಾಡಿದಾಗ ಕಡತಕ್ಕೆ ಹೋಗುವುದಕ್ಕೆ ಬಿಡುವುದು ನನಗೆ ಕಷ್ಟವಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯದಲ್ಲಿ ಬಹಳ ಗಂಭೀರವಾಗಿ, ಅದರ ಬಗ್ಗೆ ಚಿಂತನೆ ಮಾಡಿ, ಬಹಳ ದುಃಖದಿಂದ ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ದಿನಾಂಕ 28 ರಂದು ಅರೆಸ್ಟ್ ಆದರು ಎಂದಾಗ ಬಹಳ ಸಂತೋಷವಾಯಿತು. ಅವರನ್ನು ಕರೆದುಕೊಂಡು ಹೋಗಿದ್ದಾರೆ, ಇನ್ನು ಮುಂದೆ ಇದರ ವಿಚಾರಣೆಯಾಗುತ್ತದೆ ಎಂದು. ಆದರೆ 29ನೇ ತಾರೀಖು ಅವರನ್ನು ಬಿಟ್ಟಿದ್ದಾರೆ ಎಂದಾಗ ಆ ಸುದ್ದಿ ಬಂದ ತಕ್ಷಣ ನನಗೆ ದುಃಖವಾಯಿತು. ಆಗ ನಾನು ವಿಚಾರಣೆ ಮಾಡಿದಾಗ ಈ ಸುದ್ದಿ ಎಲ್ಲಾ ನನಗೆ ತಿಳಿದಿದೆ. ಯಾವ ಸ್ಟೇಷನ್‌ನಲ್ಲಿ ಅವರು ಮಾಡಿದ್ದಾರೆ. ಸೂಕ್ತವಾಗಿ ಯಾವ ಆಫೀಸ್ ಎನ್ನುವುದನ್ನು ತಮಗೆ ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ನಿಯಮ 328 ತಮಗೆಲ್ಲ ಗೊತ್ತಿರತಕ್ಕಂಥ ವಿಷಯ. ನೀವು ಆಪಾದನೆ ಮಾಡತಕ್ಕಂಥ ವಿಷಯದಲ್ಲಿ ನಾವು ಆಕ್ಷೇಪಣೆ ಮಾಡುವುದಿಲ್ಲ. ಆದರೆ ಇಲ್ಲಿ ಯಾರೇ ನಡವಳಿಕೆಗಳನ್ನು ಮಾಡಬೇಕಾಗಿದ್ದರೆ ಕೆಲವು ಜವಾಬ್ದಾರಿ ಮತ್ತು ನಿಯಮಗಳನ್ನು ಅನುಸರಿಸಿ ಮಾಡಬೇಕಾಗುತ್ತದೆ. ಇಲ್ಲಿ ಬಂದಿರತಕ್ಕಂಥ ಪ್ರಶ್ನೆ ನೀವು ಮಾಡಿರತಕ್ಕ ಆಪಾದನೆಗಳನ್ನು ನಾವು ನಿರಾಕರಿಸುತ್ತೇವೆ ಎಂದು ಅಲ್ಲ. "ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು ಕೊಟ್ಟಿದ್ದ ಹೊರತು ಯಾವ ಸದಸ್ಯರೂ ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದಂಥ ಹೇಳಿಕೆಗಳು, ಅಪರಾಧಿಗೆ ಆಪಾದನೆಯನ್ನು ಮಾಡುವ ಯಾವ ಆರೋಪವನ್ನು ಮಾಡತಕ್ಕದ್ದಲ್ಲ". ತಾವು ಅಧ್ಯಕ್ಷರಿಗೆ ಈ ವಿಷಯವನ್ನು ಮೊದಲು ತಿಳಿಸಿ ಅವರ ಪೂರ್ವಾನುಮತಿಯನ್ನು ಪಡೆದು ತಾವು ತಿಳಿಸಬೇಕು.

ಅಧ್ಯಕ್ಷರು : ಪ್ರಮೀಳಾರವರೆ, ತಾವು ಬೆಳಿಗ್ಗೆ ಮಾತನಾಡುವಾಗ ಏನು ಹೇಳಿದಿರಿ ಎಂದರೆ ನನಗೆ 28ಕ್ಕೆ ಅರೆಸ್ಟ್ ಮಾಡಿದರು, 29ಕ್ಕೆ ರಿಲೀಸ್ ಮಾಡಿದರು ಎಂಬ ಸುದ್ಧಿ ತಿಳಿದು ಬಂತು ಎಂದು ಹೇಳಿದಿರಿ. ನಾನು ಇಷ್ಟನ್ನೇ ಕೇಳುತ್ತೇನೆ, ಈಗ ವೀರಪ್ಪಮೊಯಿಲಿಯವರು ಇದ್ದಾರೆ, he is also a Senior Advocate, ಇಂಟಿಮೇಷನ್, ಇನ್‌ಫಾರ್ಮೇಷನ್, ಸ್ಪೆಕ್ಯುಲೇಷನ್, ರೂಮರ್ ಈ ನಾಲ್ಕಕ್ಕೂ ಸ್ವಲ್ಪ ವ್ಯತ್ಯಾಸವನ್ನು ಹೇಳಿಬಿಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ನಾನು ರೂಮರ್ ಬಗ್ಗೆ ಹೇಳುತ್ತಿಲ್ಲ, ಓನಲಿ ಮ್ಯಾಟರ್ ಆಫ್ ರೆಕಾರ್ಡ್ ಮಾತ್ರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಮೂರು ಜನ ವ್ಯಕ್ತಿಗಳನ್ನು ಅರೆಸ್ಟ್ ಮಾಡಿದ್ದು ನಿಜವೇ ಅಲ್ಲವೆ?

ಅಧ್ಯಕ್ಷರು : ಸುದ್ದಿ ತಿಳಿದು ಬಂತು ಅಂದರೆ, ದಯಮಾಡಿ ಕೇಳಿ ಅಕಾಡೆಮಿಕ್ ಆಗಿ ಚರ್ಚೆ ಮಾಡೋಣ. Don't get excited. I have all the patience. This is a matter for discussion. I will not run away. It is a very sensitive issue. I don't want to get into a very bad situation. ಸುದ್ದಿ ತಿಳಿದು ಬಂತು ಅಂದರೆ ಇಂಟಿಮೇಷನ್ ಎಂದು ಅರ್ಥ. Intimation sent must have come to you from a person. Intimation is always casued from a person to person.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, any information which reaches the police station is a matter of public record, public information.

ಅಧ್ಯಕ್ಷರು : ನಾನು ಏನು ಹೇಳುತ್ತೇನೆ ಎಂದರೆ, then that police station must have made an entry of it.

ಶ್ರೀ ಬಿ. ಎಸ. ಯಡಿಯೂರಪ್ಪ : ಅದೇ ಸ್ಟೇಜ್‌ನಲ್ಲೇ ಇನ್‌ಫ್ಲುಯೆನ್ಸ್ ಆಗಿರುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅರೆಸ್ಟ್ ಮಾಡಿ ಬಿಟ್ಟಿದ್ದಾರೆ.

ಅಧ್ಯಕ್ಷರು : ಯಡಿಯೂರಪ್ಪನವರೆ ದಯಮಾಡಿ ಕೇಳಿ, ನಾನು ಏನು ಹೇಳುತ್ತೇನೆ ಎಂದರೆ ತಾವು ಏಕೆ ಭಾವೊದ್ವೇಗಕ್ಕೆ ಒಳಗಾಗುತ್ತೀರಿ, ಈಗ ಮೊಯಿಲಿಯವರೆ, ಆತ ಪೋಲೀಸ್ ಕಸ್ಟಡಿಯಲ್ಲಿ ಇರುತ್ತಾನೆ, ಇಂದತಹವರು ಬಿಡಿ ಎಂದು ಫೋನ್ ಮಾಡಿ ಹೇಳುತ್ತಾರೆ. Presuming for a minute, the Private Secretary to the Hon'ble Minister of State for Home said that -he has to make an entry, if he is a officer who is duty conscious, who is loyal, he must have made an entry.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ತಮ್ಮ ಗಮನಕ್ಕೆ ಬಂದಿಲ್ಲವೇನು, ತಮಗೆ ಗೊತ್ತಿಲ್ಲವೇನು. ಕರೆದುಕೊಂಡು ಹೋಗಿ 3-4 ದಿವಸ ಇಟ್ಟುಕೊಂಡು ಎಂಟ್ರಿ ಮಾಡದಿರುವಂತಹ ನೂರಾರು ಕೇಸುಗಳು ಇಲ್ಲವೇನು? ಪ್ರತಿಯೊಂದು ದಿನ ಸ್ಟೇಷನ್‌ನಲ್ಲಿ ಅರೆಸ್ಟ್ ತೋರಿಸದಯೆ

ಸ್ಟೇಷನ್‌ನಲ್ಲಿ ಇಟ್ಟುಕೊಂಡು ಅವರಿಗೆ ಖುಷಿ ಬಂದಾಗ ಕೇಸ್ ಹಾಕುವುದು, ಖುಷಿ ಬಂದಾಗ ಬಿಡುವುದು ಇದನ್ನು ಪ್ರತಿ ದಿನ ನೋಡುತ್ತಿಲ್ಲವೆ?

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೆ, ಇಲ್ಲಿ ಮೂಲಭೂತವಾಗಿರತಕ್ಕಂಥದ್ದು, ಅವರ ಆಪಾದನೆಗಳು ಸುಳ್ಳು ಎಂದು ಆಗಲೀ ಅಥವಾ ನಿರಾಕರಿಸಬೇಕೆನ್ನುವ ಪ್ರಶ್ನೆ ಅಲ್ಲ. ಇಲ್ಲಿ ಇರತಕ್ಕಂಥದ್ದು ನಿಯಮಾವಳಿಗಳ ಪ್ರಕಾರ ನಮ್ಮ ನಡವಳಿಕೆಗಳು ಆಗಬೇಕಾಗಿದೆ. ನಾನು ಇವೊತ್ತು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ತಾವು ಇದರ ಬಗ್ಗೆ ಹೇಳಬೇಕು. ಮೂಲಭೂತವಾಗಿ ಅವರು ಇಂತಹ ಆಪಾದನೆಗಳನ್ನು ನಾವು ಮಾಡುತ್ತಿದ್ದೇವೆ ಎಂಬುದನ್ನು ತಿಳಿಸಬೇಕು. ತಮ್ಮ ಪೂರ್ವಾನುಮತಿಯನ್ನು ಕೊಟ್ಟರೆ ಮಾತ್ರ ಅವರು ಪ್ರಸ್ತಾಪ ಮಾಡಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಅರೆಸ್ಟ್ ಮಾಡಿರುವಂತದ್ದಕ್ಕೆ ದಾಖಲೆಗಳು ಇವೆ, ಇದನ್ನು ಸಿ.ಬಿ.ಐಗೆ ರೆಫರ್ ಮಾಡಿ. ಅವರು ಎಲ್ಲಾ ವಿವರಗಳನ್ನು ಎಲ್ಲಿ ಕೊಡಬೇಕೂ ಅಲ್ಲಿ ಕೊಡುತ್ತಾರೆ. ನಿಮ್ಮ ಹತ್ತಿರ ಕೊಡುವಂತದ್ದಕ್ಕೆ ನಮಗೆ ವಿಶ್ವಾಸ ಇಲ್ಲ. ಈ ಘಟನೆಯಲ್ಲಿ ನಿಮ್ಮ ಹತ್ತಿರ ದಾಖಲೆಗಳನ್ನು ಕೊಡುವುದಕ್ಕೆ ನಮಗೆ ವಿಶ್ವಾಸ ಇಲ್ಲ.

Sri. M.P. Prakash : Until such time.

(INTERRUPTION)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ನನಗೆ ನಿಮ್ಮಿಬ್ಬರ ಸಿಟ್ಟು ಏಕೆ ಎಂದು ಗೊತ್ತಾಗುತ್ತಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಮಗೆ ಸಿಟ್ಟೇ ಬರುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಇವೊತ್ತು ಸಬ್ಜೆಕ್ಟ್ ಏನು? ಇಂತಹವರ ಪತ್ರಿಕೆ ಮೇಲೆ ಇದಕ್ಕೋಸ್ಕರ ಹೀಗಾಯಿತು, ಇಂತಹ ಘಟನೆ ಆಗಬಾರದಿತ್ತು, ಸರ್ಕಾರ ಏನು ಮಾಡಿದೆ ಏನು ಬಿಟ್ಟಿದೆ ಎಂದು. ಇಲ್ಲಿ ನಾವು ವಸ್ತು ನಿಷ್ಟವಾಗಿ ಆ ವಿಷಯದ ಬಗ್ಗೆ ಚರ್ಚೆ ಮಾಡುವುದು ಬಿಟ್ಟು ಏನೇನೊ ಸಂಬಂಧಪಡದ ವಿಷಯಗಳನ್ನೇಕೆ ತರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇರೆಸ್ಪಾನ್ಸಿಬಲ್ ಪರ್ಸನ್ಸ್ ನಾವು ಇಲ್ಲಿರುವುದು? Are we irresponsible? I am sorry. ಅವರು ಪೂರ್ತಿ ಮಾತನಾಡುವುದನ್ನು ಕೇಳಿ ಆಮೇಲೆ ನೀವು ಕನ್‌ಕ್ಲೂಶನ್‌ಗೆ ಬನ್ನಿ.

ಶ್ರೀ ಜೆ.ಹೆಚ್. ಪಟೇಲ್ : ನಾನು ಕೇಳಿದ್ದೇನು ? ಸಿಟ್ಟು ಏಕೆ ಬರುತ್ತದೆ ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಸ್ವಭಾವವೇ ಹಾಗೆ. ಒಬ್ಬೊಬ್ಬರು ಮಾತನಾಡುವ ರೀತಿಯಲ್ಲಿ ಒಂದೊಂದು ತರಹ ಇರುತ್ತದೆ. ಸರ್ಕಾರವೇ ಹೀಗೆ ಅರೆಸ್ಟ್ ಮಾಡಿ ಬಿಟ್ಟಿತ್ತಲ್ಲ ಎಂದು ಸಿಟ್ಟು ಬರುತ್ತೆ.

ಶ್ರೀ ಜೆ.ಹೆಚ್. ಪಟೇಲ್ : ಇಬ್ಬರು ಸಾಕಷ್ಟು ಅನುಭವಿ ನಾಯಕರಿದ್ದಾರೆ. ನಾನು ಇಷ್ಟೇ ಹೇಳಿದೆ. ಈ ವಿಷಯವನ್ನು ವಸ್ತುನಿಷ್ಠವಾಗಿ, ಸರ್ಕಾರ ಯಾರನ್ನು ಇವೊತ್ತು ಸ್ಪೇರ್ ಮಾಡುವುದಿಲ್ಲ. ಅದು ಏಕೆ ತಡವಾಯಿತು, ಯಾರವರು ಎಂದು ಮೊಯಲಿಯವರು ಹೇಳುತ್ತಿದ್ದುದನ್ನು ಕೇಳಿದೆ. ಅದು ಬಿಟ್ಟು ಅದನ್ನು ಬೇರೆ ಕಡೆಗೆ Digress ಮಾಡುವುದು, ಅಥವಾ ವಿಷಯಕ್ಕೆ ಬೇರೆ ಯಾವುದೇ ಲೇಪನ ಮಾಡುವುದು....

ಶ್ರೀಮತಿ ಪ್ರಮೀಳಾ ನೇಸರ್ಗಿ : ಮುಖ್ಯಮಂತ್ರಿಗಳೆ, ಅರೆಸ್ಟ್ ಮಾಡಿದವರನ್ನು ಬಿಟ್ಟಿರಲ್ಲ ಎಂದು ಸಿಟ್ಟು ಬಂತು, ಬೇರೆ ಏನೂ ಅಲ್ಲ. ಅರೆಸ್ಟ್ ಮಾಡಿದವರನ್ನು ಹಿಡಿದು ವಿಚಾರಣೆ ಮಾಡಬೇಕಾಗಿತ್ತು. ಸೆಕ್ಯೂರಿಟಿ ಗಾರ್ಡ್ ಕೆನಡಿಯವರು ಮತ್ತು ಮಂಜುನಾಥ್‌ರವರು ಏನಿದ್ದಾರೆ ಕೆನಡಿಯವರ ಕೈ ಕಟ್ ಆಗಿದ್ದು ಪ್ಲಾಸ್ಟಿಕ್ ಸರ್ಜರಿ ಮಾಡಿದ್ದಾರೆ. ಮಂಜುನಾಥ್ ಎಂಬುವವರ ತಲೆಗೆ ಏಟು ಬಿದ್ದಿದೆ. ಕರೆದುಕೊಂಡು ಹೋಗಿ ಅವರನ್ನು ಎಲ್ಲಿ ಹಾಕಿದ್ದೀರಿ, ಇವನು ಬೆಂಗಳೂರಿನಲ್ಲಿ ಇಲ್ಲ. ಕರೆದುಕೊಂಡು ಬಂದು ಇವನನ್ನು ಅರೆಸ್ಟ್ ಮಾಡಿದ ತಕ್ಷಣ ಪೋಲೀಸಿನವರು ರಿಯಲ್ ಇನ್‌ವೆಸ್ಟಿಗೇಷನ್ ಮಾಡುವುದಾಗಿದ್ದರೆ ಸೆಕ್ಯೂರಿಟಿ ಗಾರ್ಡ್‌ನು ಕರೆದುಕೊಂಡು ಬಂದು ಇನ್‌ವೆಸ್ಟಿಗೇಟ್ ಮಾಡಿ ಐಡೆಂಟಿಫಿಕೇಶನ್ ಪೆರೇಡ್ ಮಾಡಿ ಇವರೋ ಅಲ್ಲವೋ ಎಂದು ಕೇಳಬೇಕಾಗಿತ್ತು. ಅದನ್ನು ಮಾಡಿಲ್ಲ, ಅವರನ್ನು ಕೇಳಿಲ್ಲ ತಕ್ಷಣ ಬಿಟ್ಟೇ ಬಿಟ್ಟರು. ಈ ಉದ್ದೇಶದಿಂದ ನಾನು ಹೇಳುತ್ತಿರುವುದು ಸಿ.ಬಿ.ಐ. ತನಿಖೆಯಾದರೆ ಇದೆಲ್ಲವೂ ಕೂಡ ಹೊರಗೆ ಬರುತ್ತದೆ, ಪರ್ಸನ್ ಯಾರು ಎಂಬುದು ಐಡೆಂಟಿಫೈ ಆಗಿದ್ದಾರೆ, ಪೋಲೀಸ್ ಸ್ಟೇಷನ್‌ನಲ್ಲಿ ಅರೆಸ್ಟ್ ಮಾಡಿದಂಥ ರೆಕಾರ್ಡ್ ಇದೆ, ಅವರನ್ನೇ ಕರೆದು ಐಡೆಂಟಿಫೈ ಮಾಡಿದರೆ ಈ ಹತ್ತು ಜನ ಯಾರು ಹೋಗಿ ಅಲ್ಲಿ ಪೆಟ್ರೋಲ್ ಹಾಕಿ ಸುಟ್ಟರೋ ಅವರನ್ನೆಲ್ಲಾ ಗುರುತು ಹಿಡಿಯುವುದಕ್ಕಾಗುತ್ತದೆ. ಅವರು ಉಪಯೋಗಿಸಿದಂತಹ ಆಯುಧಗಳನ್ನು ಸೀಜ್ ಮಾಡುವುದಕ್ಕಾಗುತ್ತದೆ. ಅದಕ್ಕೋಸ್ಕರ ಸಿ.ಬಿ.ಐಗೆ ವಹಿಸಿ ಎಂದು ಹೇಳುತ್ತಿದ್ದೇನೆ. ನೀವೇನು ಒಂದು ತಿಂಗಳಿನಲ್ಲಿ ಮಾಡಿಲ್ಲ ಎಂದು ಏನು ಉತ್ತರವನ್ನು ಕೊಟ್ಟಿದ್ದೀರಲ್ಲ ಅದು ಸರಿಯಲ್ಲ. ಅರೆಸ್ಟ್ ಮಾಡಿದವರನ್ನು ಬಿಟ್ಟುಬಿಟ್ಟಿದ್ದೀರಿ ಎನ್ನುವುದಕ್ಕೋಸ್ಕರ ಇದೆಲ್ಲಾ ವಿಷಯವನ್ನು ಹೇಳಬೇಕಾಯಿತು. ಡೈಗ್ರೆಸ್ (digress) ಮಾಡತಕ್ಕಂಥ ಉದ್ದೇಶ ನನಗಿಲ್ಲ. ಅಥವಾ ನಿಮ್ಮ ಇನ್‌ವೆಸ್ಟಿಗೇಷನ್‌ನಲ್ಲಿ ಅಡ್ಡಬರಬೇಕೆಂಬ ಉದ್ದೇಶವೂ ಇಲ್ಲ. ಆದರೆ ಮಧ್ಯೆ ಯಾರಾದರೂ ಒಬ್ಬ ವ್ಯಕ್ತಿ ಬಂದು ಆಗುತ್ತಾ ಇರತಕ್ಕಂಥ ಇನ್‌ವೆಸ್ಟಿಗೇಷನ್‌ಗೆ ತಡೆಹಾಕಿ ಯಾವುದೋ ಕಾರಣಗಳಿಂದ ಬೇರೆ ದಾರಿಗೆ ಎಳೆದುಕೊಂಡು ಹೋಗಿ ನಿಜವಾದ ಅಪರಾಧಿಗಳನ್ನು ಮುಚ್ಚಿಡತಕ್ಕಂಥ ಪ್ರಯತ್ನ ಮಾಡಿದಾಗ ನಾವು ನೀವು ಎಲ್ಲರೂ ಸೇರಿಕೊಂಡು ರಕ್ಷಣೆ ಯಾರು ಕೊಡಬೇಕಾಗಿತ್ತು ಅವರಿಗೆ ರಕ್ಷಣೆ ಕೊಡಬೇಕು ಅಪರಾಧಿಗಳಿಗೆ ಶಿಕ್ಷೆ ಮಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಹೊರತು ಬೇರೆ ದೃಷ್ಟಿಯಿಂದ ಅಲ್ಲ. ಅಧ್ಯಕ್ಷರೆ, ಇಲ್ಲಿ ಏನಾಗಿದೆಯೆಂದರೆ ಎರಡು ಕೋಟಿ ರೂಪಾಯಿ ಆಸ್ತಿಯ ಹಿಂದೆ ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್‌ಗೆ ಸೇರಿದಂಥ ಟೀಕ್ ವುಡ್ ಮತ್ತು ರೋಸ್ ವುಡ್ ಇದರ ಬಗ್ಗೆ ಕೇವಲ 50 ಸಾವಿರ ರೂಪಾಯಿಗೆ ಬೇನಾಮಿ ಟ್ರಾನ್‌ಜಾಕ್ಷನ್‌ನ್ನು ಒಬ್ಬ ಬೇರೆ ಗಣ್ಯ ವ್ಯಕ್ತಿ ಮಾಡಿಸಿಕೊಂಡು ಆಕೆಯನ್ನು ಉಳಿಸುವುದಕ್ಕೋಸ್ಕರ ಅವರನ್ನು ಹೊಡೆದು. ಕೇಸನ್ನು ತಪ್ಪಿಸುವುದಕ್ಕೋಸ್ಕರ,

ಕೇಸಿಗೆ ಹೋಗದೇ ಇರುವುದಕ್ಕೋಸ್ಕರ ಅವರನ್ನು ಹೊಡೆದು ಆಸ್ಪತ್ರೆಗೆ ಹಾಕಿ, ಕೇಸ್‌ಗೆ ಹೋಗದಂತೆ ಮಾಡಿ ಪೇಪರ್‌ನಲ್ಲಿ ಬಂದ ನಂತರ ಪೇಪರ್‌ನವರನ್ನು ಈ ತರಹ ಮಾಡುವುದಕ್ಕೆ ಹೋಗಿದ್ದಾರಲ್ಲ ಇದು ಸರಿಯಾದುದಲ್ಲ, ಇದು ಸರಿಯಾದ ರೀತಿ ವಿಚಾರಣೆಯಾಗುತ್ತಿಲ್ಲ. ಇದರಕಡೆ ತಾವು ಗಮನ ಕೊಡಬೇಕೆಂದು ಹಾಗೂ ಸರಿಯಾದಂತಹ ಅಪರಾಧಿಗಳನ್ನು ಹಿಡಿದು ಅವರಿಗೆ ಶಿಕ್ಷೆ ಕೊಡುವುದಕ್ಕೆ ತಾವು ಮುಂದಾಗಬೇಕೆಂಬ ಏಕಮಾತ್ರ ದೃಷ್ಟಿಯಿಂದ ಇದೆಲ್ಲವನ್ನು ಹೇಳಿದ್ದೇನೆಯೆ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ. ಅದಕ್ಕೋಸ್ಕರ ಇದು ಸಿ.ಬಿ.ಐ ತನಿಖೆ ಆದರೆ ಮಾತ್ರ ಇದರಲ್ಲಿ ಸತ್ಯ ಹೊರಗೆ ಬರುತ್ತದೆಯೇ ಹೊರತು ಬೇರೆ ಯಾವುದೇ ತನಿಖೆಯಿಂದ ಇದು ಆಗುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಅಧ್ಯಕ್ಷರ ಮೂಲಕ ತಮಗೆ ತಿಳಿಸುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ ; ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು, ಮೊಯಿಲಿಯವರು, ಶ್ರೀಮಾನ್ ಯಡಿಯೂರಪ್ಪನವರು, ಪ್ರಮೀಳಾರವರು, ಕುಮಾರ್‌ರವರು ಈ ಎಲ್ಲ ವಿಚಾರಗಳನ್ನು ಎತ್ತಿದ್ದಾರೆ. ಮಾನ್ಯ ಪತ್ರಿಕಾಮಿತ್ರರು ಒಂದು ದೊಡ್ಡ ಮೆರವಣಿಗೆಯನ್ನು ಕೈಗೊಂಡು ಮುಖ್ಯಮಂತ್ರಿಗಳಿಗೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿರುವಾಗ ಅವರೇ ಉತ್ತರವನ್ನು ಹೇಳಲಿ.

ಶ್ರೀ ಎಂ. ಸಿ. ನಾಣಯ್ಯ : ಮುಖ್ಯಮಂತ್ರಿಗಳು ಸ್ವಲ್ಪಹೊತ್ತಿನಲ್ಲಿ ಬಂದರು, ಅವರು ಹೇಳಿದರು ಒಂದೇ, ನಾನು ಹೇಳಿದರೂ ಒಂದೇ, ಅಂದರೆ ಒಂದು ಗಂಟೆಯಿಂದ ಎಲ್ಲವನ್ನೂ ಕೇಳಿಕೊಂಡು ಬರೆದುಕೊಂಡಿದ್ದೆಲ್ಲ ನಾನೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳು ಇಲ್ಲದೇ ಇದ್ದಾಗ, ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇದ್ದಾಗ ಉತ್ತರವನ್ನು ಕೊಟ್ಟರೆ ಅಡ್ಡಿ ಇಲ್ಲ. ಗೃಹ ಖಾತೆಗೆ ಸಂಬಂಧಪಟ್ಟಂತೆ ಮುಖ್ಯಮಂತ್ರಿಗಳೂ ಇದ್ದಾರೆ, ರೋಷನ್‌ಬೇಗ್‌ರವರು ಸಹ ಇದ್ದಾರೆ. ಮುಖ್ಯಮಂತ್ರಿಗಳು ಇಲ್ಲ ಎಂದರೆ ರೋಷನ್‌ಬೇಗ್‌ರವರು ಹೇಳಲಿ, ರೋಷನ್ ಬೇಗ್‌ರವರು ಇಲ್ಲದೇ ಇದ್ದಾಗ ನಾಣಯ್ಯನವರು ಹೇಳಲಿ. ಅವರಿಬ್ಬರೂ ಇದ್ದಾಗ ನಾಣಯ್ಯನವರು ಆ ಇಲಾಖೆ ಬಗ್ಗೆ ಹೇಳಿದರೆ ಹೇಗಾಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ : ನೀವು ಹೇಳಿರುವಂತಹದನ್ನೆಲ್ಲಾ ನಾನು ಬರೆದು ಕೊಂಡೆ, ಅವರೆಲ್ಲ ಸ್ವಲ್ಪ ಮಧ್ಯೆ ಮಧ್ಯದಲ್ಲಿ ಬಂದರು. ನಿಮಗೆ ಉತ್ತರ ಹೇಳಲಿಕ್ಕೆ ಅನುಕೂಲ ಆಗುತ್ತೆ ಎಂದು ನಾನು ಎದ್ದೆ. ಮಾನ್ಯ ಅಧ್ಯಕ್ಷರೆ, ಏಷಿಯನ್ ಏಜ್ ಪತ್ರಿಕೆಯ ಮೇಲೆ ನಡೆದಿರುವಂತಹ ದಾಳಿಯ ಬಗ್ಗೆ ಬೆಂಗಳೂರಿನಲ್ಲಿರುವಂತಹ ಪೋಲೀಸರು ಬಹಳ ಗಂಭೀರವಾಗಿ ತೆಗೆದುಕೊಂಡಿರುವಂಥಾದ್ದು ತಮಗ್ಗೆಲ್ಲಾ ಗೊತ್ತಿದೆ. ಇತ್ತೀಚಿನ ದಿವಸಗಳಲ್ಲಿ ಬೆಂಗಳೂರಿನಲ್ಲಿ ನಡೆದಂತಹ ಘಟನೆಗಳ ಬಗ್ಗೆ ನಮ್ಮ ಬೆಂಗಳೂರಿನ ಪೋಲೀಸರು ಎಷ್ಟು ಕ್ಷಿಪ್ರಗತಿಯಲ್ಲಿ ಕೆಲಸವನ್ನು ಮಾಡಿದ್ದಾರೆಂಬುದು ತಮಗೆಲ್ಲಾ ಗೊತ್ತಿದೆ, ನಮ್ಮ ಬೆಂಗಳೂರಿನ ನಾಗರೀಕರು ಸಹ ಇವರ ಕೆಲಸವನ್ನು ಮೆಚ್ಚಿದ್ದಾರೆ. ಈ ಒಂದು ಪ್ರಕರಣದಲ್ಲೂ ಕೂಡ ಬೆಂಗಳೂರಿನ ಪೋಲೀಸರು ಮಾಡುತ್ತಿರುವಂತಹ ಕಾರ್ಯಕ್ರಮದಲ್ಲಿ ನಿಖರವಾದಂತಹ ಮಾಹಿತಿಗಳು, ಸುಳಿವು ಸಿಕ್ಕಿರುವಂಥಾದ್ದು ನಿಜ.

ಶ್ರೀ ವಾಟಾಳ್ ನಾಗರಾಜ್ : ಇದೊಂದನ್ನು ಬಿಟ್ಟು.....

ಶ್ರೀ ಎಂ.ಸಿ. ನಾಣಯ್ಯ : ಇದರಲ್ಲೆ ನಾನು ಹೇಳುತ್ತಿರುವಂಥಾದ್ದು, ನಿಖರವಾದಂತಹ ಮಾಹಿತಿ ಸುಳಿವು ಸಿಕ್ಕಿದೆ. ಅದರ ಬಗ್ಗೆ ಎಲ್ಲಾ ವಿಚಾರಗಳನ್ನು ಹೇಳತಕ್ಕಂಥಾದ್ದು ನಾವು ಒಂದು professional Jealousy ಹೇಳತ್ತಕಂಥಾದ್ದು ಯಾವದೋ ಒಂದು ವರ್ಗದವರು ಮಾಡುತ್ತಿರುವಂಥಾದ್ದು, ಭೂಗತ ದೊರೆಗಳು ಮಾಡಿರತಕ್ಕಂಥಾದ್ದು ಎಲ್ಲಾ ಮಾಹಿತಿಗಳನ್ನು ಮಾಡಿ, ಯಾವ ದಿಕ್ಕಿನಲ್ಲಿ ಅವರು ತಮ್ಮ ಇನ್‌ವೆಸ್ಟಿಗೇಷನ್ ತೆಗೆದುಕೊಂಡು ಹೋಗಬೇಕೆನ್ನುವಂತಹ ಹಂತದಲ್ಲಿ ಇದ್ದಾರೆ, ಅದೇ ದಾರಿಯಲ್ಲಿ ಅದನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ನೀವು ಈಗ ಎತ್ತಿರತಕ್ಕಂಥ ಹಲವಾರು ವಿಚಾರಗಳಲ್ಲಿ ಎಲ್ಲಾದರೂ ಯಾರಿಗಾದರೂ ಇನ್‌ಸೈಡ್ ಇನ್‌ಫರ್‌ಮೇಷನ್ ಅವರಿಗೆ ಸಿಕ್ಕದೇ ಇರುವಂಥಾದ್ದು ಇದ್ದರೆ ಅದನ್ನು ತಾವು ಹೇಳಿದರೆ ಗಂಭೀರವಾಗಿ ಪರಿಗಣಿಸುತ್ತಾರೆ. ಇನ್ನು ಕೆಲವೇ ದಿವಸಗಳಲ್ಲಿ ಈ ಪ್ರಕರಣದಲ್ಲಿರುವಂತಹ ಜಾಲ ಯಾವುದು ಇದೆ ಅದನ್ನು ನಮ್ಮ ಬೆಂಗಳೂರಿನಲ್ಲಿರುವಂತಹ ಪೋಲೀಸರು ಭೇದಿಸುವಂಥಾದ್ದರಲ್ಲಿ ಸಂಪೂರ್ಣವಾದ ಮಾಹಿತಿಗಳೊಂದಿಗೆ ಸಜ್ಜಿತರಾಗಿದ್ದಾರೆ. ಈಗ ಅವರು ಈ ಕೆಲಸವನ್ನು ಮಾಡುತ್ತಿದ್ದಾರೆ. ಆದುದರಿಂದ ಅವರಿಗೆ ಈ ಒಂದು ಅವಕಾಶವನ್ನು ಕೊಡಿ. ನಾವು ಇವತ್ತು ಸಿ.ಬಿ.ಐ ಎಂದು ಹೇಳಿದರೆ ನಮ್ಮ ಸಿಟಿಯಲ್ಲಿರುವಂತಹ ಉತ್ತಮವಾದ ಅಧಿಕಾರಿಗಳು ಇಷ್ಟೆಲ್ಲಾ ಕೆಲಸವನ್ನು ಮಾಡುತ್ತಿದ್ದಾರೆ. ಆದುದರಿಂದ ಅವರಿಗೆ ಈ ಒಂದು ಅವಕಾಶವನ್ನು ಕೊಡಿ. ನಾವು ಇವತ್ತು ಸಿ.ಬಿ.ಐ ಎಂದು ಹೇಳಿದರೆ ನಮ್ಮ ಸಿಟಿಯಲ್ಲಿರುವಂತಹ ಉತ್ತಮವಾದ ಅಧಿಕಾರಿಗಳು ಇಷ್ಟೆಲ್ಲಾ ಕೆಲಸವನ್ನು ಮಾಡಿ ಈಗ ಅವರು ಮಾಡುತ್ತಿರುವಂತಹ ಕೆಲಸದಲ್ಲಿ ನಮಗೆ ನಂಬಿಕೆ ಇಲ್ಲವೆಂದು ಅವರ ನೈತಿಕ ಸ್ಥೈರ್ಯವನ್ನು ಕುಸಿಯುವಂತೆ ಮಾಡುವ ಕೆಲಸವನ್ನು ನಾವ್ಯಾರು ಮಾಡಬಾರದು. ಆದುದರಿಂದ, ಈ ಸಂದರ್ಭದಲ್ಲಿ ನಾನು ಸರ್ಕಾರದ ಪರವಾಗಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅವರು ಬಹಳ ಉತ್ತಮವಾದಂಥ ರೀತಿಯಲ್ಲಿ ಕೆಲಸವನ್ನು ಮಾಡಿ ಒಂದು ಹಂತಕ್ಕೆ ತಲುಪಿದ್ದಾರೆ. ಎಲ್ಲಾ ರೀತಿಯಲ್ಲೂ ಕೂಡ ಅವರು ಇನ್‌ವೆಸ್ಟಿಗೇಷನ್ ಅನ್ನು ತೆಗೆದುಕೊಂಡು ಹೋಗಿದ್ದಾರೆ. ಯಾವುದು ಸರಿ, ಯಾವುದು ತಪ್ಪು, ಎಂದು ಹೇಳುವಂಥಾದ್ದರಲ್ಲಿ ಅವರು ಯಾವ ಮುಖಾಂತರ ಹೋಗಬೇಕೆನ್ನುವ ಬಗ್ಗೆಯೂ ಕೂಡ ಒಂದು ಸ್ಪೆಷಲ್ ಫೋರ್ಸ್ ಸ್ಕ್ವಾರ್ಡ್ ಅನ್ನು ತಯಾರು ಮಾಡಿ ಈ ಕೆಲಸವನ್ನು ಮಾಡಿದ್ದಾರೆ. ಇನ್ನು ಕೆಲವೇ ದಿವಸಗಳಲ್ಲಿ ನೀವು ಇದೊಂದು ರಹಸ್ಯವೆಂದು ಏನು ಹೇಳುತ್ತಿದ್ದೀರಿ. ಅದನ್ನು ಭೇದಿಸುತ್ತಿದ್ದಾರೆ. ಆದರೆ ಇಲ್ಲಿ ಕಾಣದ ಕೈಗಳು ಎಂದು ಹೇಳುತ್ತಿರುವಂಥಾದ್ದು, ಇದು ಅವರಿಗೆ ಗೊತ್ತಿದೆ. ಈ ಕಾಣದ ಕೈ ಬಳಿಗೆ ಕೈ ಚಾಚುವಂತಹ ಶಕ್ತಿ ನಮ್ಮ ಪೋಲೀಸಿನವರಿಗೆ ಇದೆ. ಆದುದರಿಂದ ದಯವಿಟ್ಟು ಅಲ್ಲಿಯವರೆಗೆ ಅವರಿಗೆ ಅವಕಾಶವನ್ನು ಕೊಡಿ. ಅವರು ಈ ಕೆಲಸವನ್ನು ಮಾಡುತ್ತಾರೆ. ಅವರು ಈ ಹಂತಕ್ಕೆ ತಲುಪಿದ ಮೇಲೆ ಅದನ್ನು ಸಿ.ಬಿ.ಐನವರಿಗೆ ವಹಿಸುವಂಥಾದ್ದು ಬೇಕಾಗಿಲ್ಲ. ಇದರಲ್ಲಿ ವಿಳಂಬ ಮಾಡುವುದಿಲ್ಲ, ಇನ್ನು ಕೆಲವೇ ದಿವಸಗಳಲ್ಲಿ ಅವರನ್ನು ಹಿಡಿಯುತ್ತಾರೆ. ಅವರಿಗೆ ಅವಕಾಶವನ್ನು ಕೊಡುವಂಥಾದ್ದು ನಮ್ಮ ಕೆಲಸವಾಗಿದೆ. ಆದುದರಿಂದ ಸರ್ಕಾರ ಇವತ್ತು ಯಾವುದನ್ನು ಮುಚ್ಚುಮರೆ ಮಾಡುವುದಿಲ್ಲ. ನೀವು ಯಾವುದೇ ಕಾಣದ ಕೈಗಳು ಇವೆ, ಯಾರೋ ಅವರಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ ಎಂದು ಹೇಳಿದಿರಿ ಹಾಗೆ

ಏನೂ ಇಲ್ಲ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಕೆಲವು ವಿಚಾರಗಳನ್ನು ಹೇಳಿರತಕ್ಕಂಥಾದ್ದು ಏನಿದೆ ಅದರ ಬಗ್ಗೆ ಕೂಡ ತನಿಖೆ ಮಾಡಿ, ಯಾರಿಗೂ ರಕ್ಷಣೆ ಕೊಡುವಂತಹ ಪ್ರಮಾದವನ್ನು ನಮ್ಮ ಸರ್ಕಾರ ಮಾಡುವುದಿಲ್ಲ. ಎಲ್ಲಾ ಪತ್ರಿಕಾ ಮಿತ್ರರು ನಮ್ಮ ಮಾನ್ಯ ಮುಖ್ಯ ಮಂತ್ರಿಯವರ ಹತ್ತಿರ ಮೆರವಣಿಗೆಯ ಮುಖಾಂತರ ಬಂದು ಒಂದು ಮನವಿ ಪತ್ರವನ್ನು ಕೊಟ್ಟಿದ್ದಾರೆ. ಅವರು ಕೂಡ ಕೆಲವು ವಿಚಾರಗಳನ್ನು ನೇರವಾಗಿ ಹೇಳಿದ್ದಾರೆ. ನಾವು ಇದರ ಬಗ್ಗೆ ನಿಖರವಾದ ಸುಳಿವು ಸಿಕ್ಕಿದೆ, ಇದನ್ನು ನಾವು ಭೇದಿಸುತ್ತಿದ್ದೇವೆ, ನೀವು ನಮ್ಮ ಮೇಲೆ ವಿಶ್ವಾಸವನ್ನು ಇಡಿ ಎಂದು ಹೇಳಿದ್ದಾರೆ. ಅವರೂ ಸಹ ಇದನ್ನು ಒಪ್ಪಿಕೊಂಡು ಹೋಗಿದ್ದಾರೆ.ಆದುದರಿಂದ ಈ ಪ್ರಕರಣ ಯಾವುದು ಇದೆ, ಈ ಪ್ರಕರಣವನ್ನು ಸಂಪೂರ್ಣವಾಗಿ ಭೇಧಿಸಿ ಇದರಲ್ಲಿರುವಂತಹ ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಅವರಿಗೆ ಶಿಕ್ಷೆಯನ್ನು ಕೊಡುವಂತಹ ಕಾರ್ಯದಲ್ಲಿ ಸಿಟಿ ಪೋಲೀಸ್‌ನವರು ಮತ್ತು ನಗರ ಪೋಲೀಸ್‌ನವರು ಕಾರ್ಯಪ್ರವೃತ್ತರಾಗಿದ್ದಾರೆ. ಆದುದರಿಂದ ಅವರಿಗೆ ಅವಕಾಶವನ್ನು ಕೊಡುವಂತಹ ಮಟ್ಟದಲ್ಲಿ ನಾವು ನಮ್ಮ ಕೆಲಸವನ್ನು ಮಾಡಬೇಕು. ಆದುದರಿಂದ ಇದನ್ನು ಸಿ.ಬಿ.ಐನವರಿಗೆ ಒಪ್ಪಿಸುವಂಥಾದ್ದಕ್ಕೆ ಯಾವುದೇ ಕಾರಣಗಳು ಇಲ್ಲ. ಇನ್ನು ಮತ್ತೊಂದು ವಿಚಾರ ಶ್ರೀ ಸತ್ಯನಾರಾಯಣರ ಕೊಲೆ ಪ್ರಕರಣ ಇದರಲ್ಲಿ ಪ್ರಮುಖವಾದಂತಹ ಆರೋಪಿ ನಾಗೇಂದ್ರನ್ ಎನ್ನುವವರನ್ನು ಈಗಾಗಲೇ ನ್ಯಾಯಾಂಗದ ಕಸ್ಟಡಿಯಲ್ಲಿಡಲಾಗಿದೆ. ಇನ್ನು ಬಾಕಿ ಇರುವಂತಹ ಆರೋಪಿಗಳು ಯಾರಿದ್ದಾರೆ. ಅವರನ್ನು ಕೂಡ ಈಗಾಗಲೇ ಪತ್ತೆ ಹಚ್ಚುವಂತಹ ಕಾರ್ಯಕ್ರಮದಲ್ಲಿ ಸಿ.ಓ.ಡಿಯವರು ಕಾರ್ಯೋನ್ಮುಖರಾಗಿದ್ದಾರೆ. ಇವರು ಇನ್ನು ಕೆಲವೇ ದಿವಸಗಳಲ್ಲಿ ಬಾಕಿ ಇರುವವರ ವಿರುದ್ಧ ಚಾರ್ಜ್ ಶೀಟ್ ಫೈಲ್ ಮಾಡುವಂಥಾದ್ದು ಆಗುತ್ತಿದೆ. ಏಕೆಂದರೆ ಒಂದು ಸಲ ಇನ್‌ವೆಸ್ಟಿಗೇಷನ್ ಮಾಡಿ ಎಫ್‌ಐಆರ್ ಫೈಲ್ ಮಾಡಿದ ಮೇಲೆ 90 ದಿವಸದೊಳಗೆ ಚಾರ್ಜ್ ಶೀಟ್ ಹಾಕಬೇಕು. ತಾವು ಆ ವಿಷಯವನ್ನು ಎತ್ತಿದ್ದೀರಿ. ಈ ಕೆಲಸವನನು ಸಿ.ಓ.ಡಿಯವರು ಚಾರ್ಜ್ ಶೀಟ್ ಅನ್ನು ಫೈಲ್ ಮಾಡಿ ತಪ್ಪಿಸತ್ಥರ ಮೇಲೆ ಕ್ರಮ ಕೈಗೊಳ್ಳತಕ್ಕಂಥದ್ದು ಖಂಡಿತವಾಗಿ ಮಾಡುತ್ತಾರೆ. ಇನ್ನು ತಾವು ಹೇಳಿರುವಂಥ ಹಲವಾರು ವಿಚಾರಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಮತ್ತು ಬೆಂಗಳೂರು ನಗರದಲ್ಲಿ ನಡೆದಿರುವಂತಹ ದರೋಡೆ ಭೂಗತ ದೊರೆಗಳು ಯಾರಿದ್ದಾರೆ. ಅವರನ್ನು ಶಿಕ್ಷೆ ಮಾಡುವಂತಹ ನಿಟ್ಟಿನಲ್ಲಿ ಕಳೆದ ಹತ್ತಾರು ತಿಂಗಳುಗಳಲ್ಲಿ ನಾವು ಮಾಡಿರುವಂತಹ ಕೆಲಸ ಬಹುಶಃ ಹಿಂದೆ ಇದ್ದಂತಹ ಯಾವ ಸರ್ಕಾರಗಳು ಮಾಡದೇ ಇರುವಂತಹ ಕೆಲಸವನ್ನು ಮಾಡಿದ್ದಾರೆನ್ನುವಂತಹ ಆತ್ಮವಿಶ್ವಾಸ ಈ ಬೆಂಗಳೂರು ನಗರದ ನಾಗರಿಕರಿಗೆ ಇದೆ ಎಂದು ಹೇಳುತ್ತೀರುವಂಥಾದ್ದು ನಾವೆಲ್ಲ ಒಪ್ಪಬೇಕು. ಆದುದರಿಂದ, ನಾವು ಮಾಡುತ್ತಿರುವಂತಹ ಕೆಲಸದಲ್ಲೆ ಯಾವುದೇ ಸಂಶಯ ಪಡಬೇಕಾಗಿಲ್ಲ. ಸರ್ಕಾರದವರು ಎಲ್ಲಾ ಕೆಲಸವನ್ನು ನಿರ್ದಾಕ್ಷಿಣ್ಯವಾಗಿ, ನಿರ್ಭೀತಿಯಿಂದ ಮಾಡತಕ್ಕಂಥಾದ್ದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ಆದುದರಿಂದ ದಯಮಾಡಿ, ತಾವು ಅವಕಾಶವನ್ನು ಕೊಡಿ. ಇನ್ನು 15-20 ದಿವಸಗಳಲ್ಲಿ ಏನು ಆಯಿತು. ಇದರ ಬಗ್ಗೆ ಏನು ಪ್ರಗತಿಯನ್ನು ಸಾಧಿಸಿದ್ದೇವೆನ್ನುವುದನ್ನು ನಾವೇ ಸದನದಲ್ಲಿ ನಿಮ್ಮ ಮುಂದೆ ಇಡುವುದಕ್ಕೆ ತಾವು ಒಂದು ಅವಕಾಶವನ್ನು ಕೊಡಿ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಇದನ್ನು ಸಿ.ಬಿ.ಐಗೆ ಕೊಡಬೇಕೆಂದು ತಮ್ಮನ್ನು ಏಕೆ ಕೇಳಿಕೊಂಡಿದ್ದೇವೆಂದರೆ ಇದರಲ್ಲಿ ನಾವು ಬರೀ ಹೇಳುತ್ತೇವೆಂದು ಅಲ್ಲ. ಲೀಡಿಂಗ್ ನ್ಯೂಸ್ ಪೇಪರ್‌ನಲ್ಲಿ, ಅಲ್ಲಿ ಸ್ಥಳದಲ್ಲಿರುವಂತಹ ಜನರು ಎಲ್ಲರೂ ಕೂಡ ಇದರಲ್ಲಿ ಏನು ಹೇಳುತ್ತಿದ್ದಾರೆಂದರೆ ಈ ಸತ್ಯನಾರಾಯಣನ ಕೊಲೆ ಕೇಸ್‌ನಲ್ಲಿ ರಾಜಕಾರಣಿಗಳ ಕೈ ಇದೆ ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ಇವತ್ತು ನಿಮಗೆ ಹೇಳುತ್ತಿದ್ದೇವೆ. ನಾವು ಅಪವಾದ ಮಾಡಬೇಕೆಂದು, ಅಲಿಗೇಷನ್ ಮಾಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಇದರಲ್ಲಿ impartial enquiry ಆಗಬೇಕು, ಇಲ್ಲ ಎಂದರೆ ನಾಳೆ ಏನು ಆಗುತ್ತದೆಂದರೆ ಇಲ್ಲಿ ಇರುವ ತಹ ಕೆಲವು ಅಧಿಕಾರಿಗಳ ಬಗ್ಗೆ ಈಗಾಗಲೇ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಕೆಲವಾರು ವಿಷಯಗಳನ್ನು ಹೇಳಿದರು. ನೀವು ಅದಕ್ಕೆ ಅಬ್ಜೆಕ್ಷನ್ ತೆಗೆದುಕೊಂಡಿರಿ. ಅಂತಹ ಅಬ್ಜೆಕ್ಷನ್ ತೆಗೆದುಕೊಳ್ಳುವಂತಹ ಅವಶ್ಯಕತೆ ಇರಲಿಲ್ಲ. ಏಕೆಂದರೆ ನಿಮ್ಮ ಆಫೀಸ್‌ನಿಂದ ಫೋನ್ ಹೋಗಿದೆ ಎಂದು ಹೇಳಿದರೆ ಅದು ಅಲಿಗೇಷನ್ ಆಗುತ್ತದೆಯೆ ? ಅದಕ್ಕೆ ಏನು ನೋಟೀಸ್ ಬೇಕಾಗಿರಲಿಲ್ಲ. ಆದರೆ ಅದೇ ರೀತಿಯಾಗಿ ನಾಳೆ ಈ ರೀತಿ ಎನ್‌ಕ್ವೈರಿ ನಡೆದಾಗ ಸ್ಥಳೀಯ ಪೋಲೀಸರ ಮೇಲೆ ಸಿಓಡಿಯವರ ಮೇಲೆ ಒತ್ತಡ ಬರುವಂತಹ ಸಾಧ್ಯತೆಗಳು ಇದೆ. ಏಕೆಂದರೆ, ಈಗಾಗಲೇ ರಾಜಕಾರಣಿಗಳು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆನ್ನುವಂತಹ ಮಾತನ್ನು ಹೇಳಿದ ಮೇಲೂ ಕೂಡ ನೀವು ಇದನ್ನು ಸಿಬಿಐಗೆ ಒಪ್ಪಿಸುವುದಕ್ಕೆ ತಯಾರು ಇಲ್ಲ. ಎರಡನೆಯದಾಗಿ ಏಷಿಯನ್ ಏಜ್ ಪತ್ರಿಕೆಯ ಮೇಲೆ ದಾಳಿಯಾಗಿರುವ ಹಿನ್ನಲೆಯಲ್ಲಿ ಯಾರಿದ್ದಾರೆ. ಯಾವ ರೀತಿಯಲ್ಲಿ ಅಲ್ಲಿ ಈ ಗಲಾಟೆ ನಡೆಯಿತು, ಎನ್ನುವಂಥಾದ್ದರ ಬಗ್ಗೆ ಕೂಡ ಹೇಳಿದ್ದಾರೆ. ಹಿಂದೆ "ಕ್ರಾಂತಿ" ಎನ್ನುವ ಪೇಪರ್ ಸಂಪಾದಕರ ಕೊಲೆಯಾದ ಮೇಲೆ ಶ್ರೀರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಇದನ್ನು ಸಿ.ಬಿ.ಐ ತನಿಖೆಗೆ ಕಳುಹಿಸಿದರು. ಇದರಲ್ಲಿ ಯಾರಿದ್ದಾರೆನ್ನುವಂಥಾದ್ದನ್ನು ಪತ್ತೆ ಹಚ್ಚಬೇಕೆಂದು ಅವರು ಈ ರೀತಿ ಕ್ರಮ ತೆಗೆದುಕೊಂಡರು. ಇವತ್ತು ಕೂಡ ಆ ಒಂದು ವಾತಾವರಣ ಗುಂಡ್ಲುಪೇಟೆಯಲ್ಲಿ ಇದೆ. ಯಾವ ಸಾಕ್ಷಿಗಳು ಮುಕ್ತವಾಗಿ ಮುಂದೆ ಬರುವುದಿಲ್ಲ, ಮತ್ತೆ ಸ್ಥಳೀಯ ಪೋಲೀಸರು ಕೂಡ ಏನಾದರೂ ಪ್ರಶ್ನೆಯನ್ನು ಕೇಳುವುದಕ್ಕೆ ಹೋದರೆ ಅಲ್ಲೂ ಕೂಡ ಒತ್ತಡ ಬರುವಂತಹ ಸಾಧ್ಯತೆಗಳು ಇದೆ. ಅಲ್ಲಿ ಮುನಿಸಿಪಾಲಿಟಿ ಕೌನ್ಸಿಲರ್ ಇದ್ದಾರೆ ಮತ್ತು "openly journalist exposes Dal MLA, man killed" Indian Expressನಲ್ಲಿ ಅಂತ ಎಲ್ಲವನ್ನೂ ಬರೆದಿದ್ದಾರೆ. ನಾವು ಅವರ ಮೇಲೆ ಹೇಳುತ್ತೇವೆಂದು ಅಲ್ಲ. ಅವರು ಇದ್ದಾರೋ, ಇಲ್ಲವೋ ಎನ್ನುವುದನ್ನು ತಿಳಿಸಲು ಸಿ.ಬಿ.ಐ ತನಿಖೆಯನ್ನು ಮಾಡಿಸಬೇಕು. ಆದುದರಿಂದ, ದಯಮಾಡಿ ತಾವು ಅದಕ್ಕೆ ಒಪ್ಪಿಕೊಳ್ಳಬೇಕು. ಈಗ ಅದನ್ನು ನೀವು ಒಪ್ಪಿಕೊಳ್ಳುವ ಅವಶ್ಯಕತೆ ಇಲ್ಲವೆಂದಾದರೆ ನಮಗೆ ಬೇರೆ ನಿರ್ವಾಹವಿಲ್ಲ. ನಾವು ಇವರ ನೀತಿಯ ವಿರುದ್ಧ ಪ್ರತಿಭಟಿಸಿ ವಾಕ್ ಔಟ್ ಮಾಡುತ್ತೇವೆ, ಬೇರೆನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಮಗೆ ಇಲ್ಲಿರುವಂತಹ ಪೊಲೀಸ್ ಅಧಿಕಾರಿಗಳ ಬಗ್ಗೆ ವಿಶ್ವಾಸವಿದೆ. ನಿಮ್ಮ ಸರ್ಕಾರಕ್ಕೆ ಅಪರಾಧಿಗಳನ್ನು ಹಿಡಿಯಬೇಕೆನ್ನುವಂಥಾದ್ದು ಇಲ್ಲ.

ನಿಮಗೆ ಒಂದಲ್ಲ ಒಂದು ರೀತಿಯಿಂದ ಸಹಕಾರವಿರುವುದರಿಂದ ಇವತ್ತು ನಿರ್ಭೀತಿಯಿಂದ ಪೊಲೀಸ್ ಅಧಿಕಾರಿಗಳು ಕೆಲಸ ಮಾಡುವುದಕ್ಕೆ ಆಗದೇ ಇರುವುದರಿಂದ ಇದನ್ನು ನೀವು ಸಿಬಿಐಗೆ ವಹಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಏಷಿಯನ್ ಏಜ್ ಪತ್ರಿಕೆಯಂತೆ ಮುಂದೆ ಆಗಬಾರದೆಂದು ನಾವು ಈ ರೀತಿಯ ಕ್ರಮವನ್ನು ಕೈಗೊಂಡಿರುವುದು.

(ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು, ಬಿ.ಜೆ.ಪಿ ಪಕ್ಷದ ಸದಸ್ಯರುಗಳು ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಇನ್ನಿತರ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು).

MR. SPEAKER : Have you to say something?

ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರರೆ, ಶ್ರೀಮತಿ ಪ್ರಮೀಳಾ ನೇಸರ್ಗಿಯವರು ನಮ್ಮ ಕಛೇರಿಯಿಂದ ಫೋನ್ ಮಾಡಿದ್ದರು ಎಂದು ಹೇಳಿದರು. Sir, on 29th Sadiq, Imtiaz and Aslam were arrested and send to the court on 30th where they were released on bail by the Hon'ble court. This is for the information of the House.

ಶ್ರೀ ಕೆ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಸತ್ಯ ನಾರಾಯಣರ ಕೊಲೆ ಕೇಸ್‌ನಲ್ಲಿ ಶಾಸಕರುಗಳ ಹೆಸರುಗಳು ಪತ್ರಿಕೆಗಳಲ್ಲಿ ಪ್ರಸ್ತಾಪವಾಗಿದೆ, ಎನ್ನುವ ವಿಚಾರವನ್ನು ತಿಳಿಸಿದ್ದಾರೆ.

ಅಧ್ಯಕ್ಷರು : ಬೇಡ, ಚೆನ್ನಾಗಿರುವುದಿಲ್ಲ, ಅವರು ಸಭೆಯಲ್ಲಿ ಇಲ್ಲ. ಪರವಾಗಿಲ್ಲ ಬಿಡಿ. ಅವರು ನಿಮ್ಮ ಮೇಲೆ ಏನು ಅಲಿಗೇಷನ್ ಮಾಡಿಲ್ಲ. ಈಗ ಒಂದೆರಡು ಪ್ರಕಟಣೆಗಳು ಇದೆ, ಅದನ್ನು ಓದುತ್ತೇನೆ.

ಪ್ರಕಟಣೆಗಳು

ಅಧ್ಯಕ್ಷರು :

1. ಬಿ.ಜೆ.ಪಿ. ಶಾಸಕಾಂಗ ಪಕ್ಷದ ಉಪ ನಾಯಕರಾಗಿದ್ದ ಶ್ರೀ ವೈ. ರಾಮಕೃಷ್ಣರವರ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ಶ್ರೀ ಎಸ್. ಸುರೇಶ್ ಕುಮಾರ್‌ರವರನ್ನು ಉಪ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಬಿ.ಜೆ.ಪಿ ಶಾಸಕಾಂಗ ಪಕ್ಷದ ನಾಯಕರು ತಿಳಿಸಿರುವುದರಿಂದ ಶ್ರೀ ಎಸ್. ಸುರೇಶ್ ಕುಮಾರ್‌ರವರನ್ನು ವಿಧಾನ ಸಭೆಯಲ್ಲಿ ಬಿ.ಜೆ.ಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ನೇಮಿಸಲಾಗಿದೆ.

2. ದಿನಾಂಕ: 31.7.1997ರಂದು ಆಲ್ ಇಂಡಿಯಾ ಅಣ್ಣಾ ಡಿಎಂಕೆ ಪಕ್ಷದ ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಮುನಿಯಪ್ಪನವರು ನನಗೆ ಪತ್ರವನ್ನು ಬರೆದು ದಿನಾಂಕ : 22.5.1997ರಿಂದ ಎ.ಐ.ಎ.ಡಿ.ಎಂ.ಕೆ ಪಕ್ಷ ಇಬ್ಭಾಗವಾದ ನಂತರ ಅವರು ಶ್ರೀಮತಿ ಜಯಲಲಿತರವರ ನಾಯಕತ್ವದ